(ಪು) ಓಂ ॥ ತಸ್ಮಾದ್ ಯಜ್ಞಾತ್ ಸರ್ವಹುತಃ । ಸಂಭೃತಂ ಪೃಷದಾಜ್ಯಮ್ । ಪಶೂಗ್‍ಗ್ ಸ್ತಾಗ್ ಶ್ಚಕ್ರೇ ವಾಯವ್ಯಾನ್ । ಆರಣ್ಯಾನ್ ಗ್ರಾಮ್ಯಾಶ್ಚಯೇ ॥೯॥

(ಶ್ರೀ) ಓಂ ॥ ಕ್ಷುತ್ ಪಿಪಾಸಾಮಲಾಂ ಜ್ಯೇಷ್ಠಾಮಲಕ್ಷ್ಮೀರ್ ನಾಶಯಾಮ್ಯಹಮ್ । ಅಭೂತಿಮಸಮೃದ್ಧಿಂ ಚ ಸರ್ವಾಂ ನಿರ್ಣುದ ಮೇ ಗೃಹಾತ್ ॥೮॥

ಯಜ್ಞೋಪವೀತಂ ಪರಮಂ ಪವಿತ್ರಂ ಪ್ರಜಾಪತೇರ್ಯತ್ ಸಹಜಂ ಪುರಸ್ತಾತ್ । ಆಯುಷ್ಯಮಗ್ರ್ಯಂ ಪ್ರತಿಮುಂಚ ಶುಭ್ರಂ ಯಜ್ಞೋಪವೀತಂ ಬಲಮಸ್ತು ತೇಜಃ ॥

ಓಂ ನಮೋ ನಾರಾಯಣಾಯ । ಮನುನಾಮಕ ಭಾರತೀರಮಣಮುಖ್ಯ-ಪ್ರಾಣಾಂತರ್ಗತ ಶ್ರೀ ಮಹಾಲಕ್ಷ್ಮೀಸಮೇತ ಶ್ರೀ ಸತ್ಯನಾರಾಯಣಸ್ವಾಮಿನೇ ನಮಃ । ಯಜ್ಞೋಪವೀತಂ ಸಮರ್ಪಯಾಮಿ ॥ (ಜನಿವಾರ ಏರಿಸಬೇಕು. ಅಥವಾ ಮಂತ್ರಾಕ್ಷತೆ ಅರ್ಪಿಸಬೇಕು)

೯. ಗಂಧಃ - (ಪೌ) ಶ್ರೀಖಂಡಂ ಚಂದನಂ ದಿವ್ಯಂ ಗಂಧಾಢ್ಯಂ ಸುಮನೋಹರಮ್। ವಿಲೇಪನಂ ಸುರಶ್ರೇಷ್ಠ ಗಂಧೋಽಯಂ ಪ್ರತಿಗೃಹ್ಯತಾಮ್ ॥ ಗೋರೋಚನಂ ಚಂದನ ದೇವದಾರು - ಕರ್ಪೂರಕೃಷ್ಣಾಗರು ನಾಗರಾಣಿ । ಕಸ್ತೂರಿಕಾ ಕೇಶರಮಿಶ್ರಿತಾನಿ ಗೃಹಾಣ ದೇವೇಶ ಮಯಾರ್ಪಿತಾನಿ ॥

(ಪು) ಓಂ ॥ ತಸ್ಮಾದ್ ಯಜ್ಞಾತ್ ಸರ್ವಹುತಃ । ಋಚಃ ಸಾಮಾನಿ ಜಜ್ಞಿರೇ । ಛಂದಾಗ್‍ಂಸಿ ಜಜ್ಞಿರೇ ತಸ್ಮಾತ್ । ಯಜುಸ್ತಸ್ಮಾದಜಾಯತ ॥೧೦॥

(ಶ್ರೀ) ಓಂ ॥ ಗಂಧದ್ವಾರಾಂ ದುರಾಧರ್ಷಾಂ ನಿತ್ಯಪುಷ್ಟಾಂ ಕರೀಷಿಣೀಮ್ । ಈಶ್ವರೀಗ್‍ಂ ಸರ್ವಭೂತಾನಾಂ ತಾಮಿಹೋಪಹ್ವಯೇ ಶ್ರಿಯಮ್ ॥೯॥

ಓಂ ನಮೋ ನಾರಾಯಣಾಯ । ಮನುನಾಮಕಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀ ಮಹಾಲಕ್ಷ್ಮೀಸಮೇತ ಶ್ರೀ ಸತ್ಯನಾರಾಯಣಸ್ವಾಮಿನೇ ನಮಃ ॥ ದಿವ್ಯ ಗಂಧಂ ಸಮರ್ಪಯಾಮಿ ॥ (ಗಂಧವನ್ನು ಚಿಕ್ಕ ಉಂಡೆ ಮಾಡಿ ಅಥವಾ ತುಳಸೀದಳದಲ್ಲಿ ಏರಿಸಬೇಕು)

ಅಕ್ಷತೆ ಏರಿಸುವ ಮಂತ್ರ - ಕಸ್ತೂರೀಕಲ್ಕಜಂ ಭಾಲೇ ತಿಲಕಂ ತು ಮಯಾ ಕೃತಮ್ । ಸಂಗ್ರಹಾಣ ಸುರಶ್ರೇಷ್ಠ ಶ್ರೀಶ ಭಕ್ತಾರ್ತಿನಾಶನ ॥ ಓಂ ನಮೋ ನಾರಾಯಣಾಯ । ಮನುನಾಮಕ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀ ಮಹಾಲಕ್ಷ್ಮೀಸಮೇತ ಶ್ರೀ ಸತ್ಯನಾರಾಯಣ ಸ್ವಾಮಿನೇ ನಮಃ ॥ ಅಕ್ಷತಾನ್ ಸಮರ್ಪಯಾಮಿ ॥ (ತುಳಸೀದಳದಿಂದ ಅಕ್ಷತೆ ಸಮರ್ಪಿಸಬೇಕು)

ಮಂತ್ರಾಕ್ಷತೆ ಏರಿಸುವ ಮಂತ್ರ - ಶಾಲೇಯಾನಕ್ಷತಾನ್ ಶ್ವೇತಾನ್ ಚಂದ್ರಾಭಾನ್ ವಿಮಲಾನ್ ಶುಭಾನ್ । ಗೃಹಾಣ ಸತ್ಯದೇವೇಶ ಪುರಾಣಪುರುಷೋತ್ತಮ ॥ (ಅಥವಾ) ಶ್ವೇತತಂಡುಲ ಸಂಯುಕ್ತಾನ್ ಕುಂಕುಮೇನ ವಿರಾಜಿತಾನ್ । ಅಕ್ಷತಾನ್ ಪರಿಗೃಹ್ಣೀಷ್ವ

ನಾರಾಯಣ ನಮೋಸ್ತು ತೇ ॥ ಓಂ ನಮೋ ನಾರಾಯಣಾಯ । ಮನುನಾಮಕ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀ ಮಹಾಲಕ್ಷ್ಮೀ ಸಮೇತ ಶ್ರೀ ಸತ್ಯನಾರಾಯಣಸ್ವಾಮಿನೇ ನಮಃ ॥ ಅಕ್ಷತಾನ್ ಸಮರ್ಪಯಾಮಿ ॥

ಮಹಾಲಕ್ಷ್ಮೀ ಪೂಜಾ - ಶ್ರೀ ಮಹಾಲಕ್ಷ್ಮ್ಯೈ ನಮಃ । ಕಂಚುಕಂ ಸಮರ್ಪಯಾಮಿ॥ ಹಿರಣ್ಯವರ್ಣಾಯ್ಯೈ ನಮಃ । ಕಂಠಸೂತ್ರಂ ಸಮರ್ಪಯಾಮಿ (ತಾಳಿ) । ಹರಿಣ್ಯೈ ನಮಃ। ತಾಡಪತ್ರಂ (ಬಿಚ್ಚಾಲೆ) ಸಮರ್ಪಯಾಮಿ ॥ ಸುವರ್ಣರಜತಸ್ರಜಾಯೈ ನಮಃ । ಕಂಕಣಾನಿ (ಬಳೆ) ಸಮರ್ಪಯಾಮಿ ॥ ಚಂದ್ರಾಯೈ ನಮಃ । ಹರಿದ್ರಾಚೂರ್ಣಂ (ಅರಿಶಿನ) ಸಮರ್ಪಯಾಮಿ ॥ ಹಿರಣ್ಮಯೈ ನಮಃ । ಕುಂಕುಮಂ ಸಮರ್ಪಯಾಮಿ ॥ ಸಿಂಧೂರಂ ನಾನಾಭೂಷಣಾನಿ ಪರಿಮಲದ್ರವ್ಯಾಣಿ ಚ ಸಮರ್ಪಯಾಮಿ ॥

೧೦. ಪತ್ರ - ಪುಷ್ಪ ಪೂಜಾ – ಮಾಲ್ಯಾದೀನಿ ಸುಗಂಧೀನಿ ಮಾಲತ್ಯಾದೀನಿ ವೈ ಪ್ರಭೋ । ಮಯಾಹೃತಾನಿ ಪೂಜಾರ್ಥಂ ಪುಷ್ಪಾಣಿ ಪ್ರತಿಗೃಹ್ಯತಾಮ್ ॥ ಅಹಿಂಸಾ ಪ್ರಥಮಂ ಪುಷ್ಪಂ ಪುಷ್ಪಮಿಂದ್ರಿಯ ನಿಗ್ರಹಃ । ಸರ್ವಭೂತದಯಾ ಪುಷ್ಪಂ ಸತ್ಯಪುಷ್ಪಂ ವಿಶೇಷತಃ ॥ ಜ್ಞಾನಪುಷ್ಪಂ ತಪಃ ಪುಷ್ಪಂ ಕ್ರಿಯಾಪುಷ್ಪಂ ತಥೈವ ಚ । ಧ್ಯಾನಂ ಚೈವಾಷ್ಟಮಂ ಪುಷ್ಪಂ ಏಭಿಸ್ತುಷ್ಯತಿ ಕೇಶವಃ ॥

ಅಥ ಅಂಗಪೂಜಾ (ಮಂತ್ರಾಕ್ಷತೆಯಿಂದ) –ಓಂ ಶ್ರೀ ಸತ್ಯದೇವಾಯ ನಮಃ । ಪಾದೌ ಪೂಜಯಾಮಿ ॥ ಓಂ ಶ್ರೀ ಸತ್ಯಾತ್ಮನೇ ನಮಃ । ಗುಲ್ಫೌ ಪೂಜಯಾಮಿ ॥ ಓಂ ಶ್ರೀ ಸತ್ಯನಿಧಯೇ ನಮಃ । ಜಾನುನೀ ಪೂಜಯಾಮಿ ॥ ಓಂ ಶ್ರೀ ಸತ್ಯಸಂಕಲ್ಪಾಯ ನಮಃ । ಜಂಘೇ ಪೂಜಯಾಮಿ ॥ ಓಂ ಶ್ರೀ ಸತ್ಯಾಧೀಶಾಯ ನಮಃ । ಊರೂ ಪೂಜಯಾಮಿ ॥ ಓಂ ಶ್ರೀ ಸತ್ಯರೂಪಾಯ ನಮಃ । ಗುಹ್ಯಂ ಪೂಜಯಾಮಿ ॥ ಓಂ ಶ್ರೀ ಸತ್ಯಸೇವ್ಯಾಯ ನಮಃ । ಜಘನಂ ಪೂಜಯಾಮಿ ॥ ಓಂ ಶ್ರೀ ಸತ್ಯವಟವೇ ನಮಃ । ಕಟಿಂ ಪೂಜಯಾಮಿ॥ ಓಂ ಶ್ರೀ ಸತ್ಯೋದರಾಯ ನಮಃ । ಉದರಂ ಪೂಜಯಾಮಿ ॥ ಓಂ ಶ್ರೀ ಸತ್ಯಧೈರ್ಯಾಯ ನಮಃ । ಹೃದಯಂ ಪೂಜಯಾಮಿ ॥ ಓಂ ಶ್ರೀ ಸತ್ಯಕಾಮಾಯ ನಮಃ। ಪಾರ್ಶ್ವೇ ಪೂಜಯಾಮಿ ॥ ಓಂ ಶ್ರೀ ಸತ್ಯೇಷ್ಟಾಯ ನಮಃ । ಪೃಷ್ಠದೇಶಂ ಪೂಜಯಾಮಿ॥ ಓಂ ಶ್ರೀ ಸತ್ಯಪರಾಯಣಾಯ ನಮಃ । ಸ್ಕಂಧೌ ಪೂಜಯಾಮಿ ॥ ಓಂ ಶ್ರೀ ಸತ್ಯಶೌರ್ಯಾಯ ನಮಃ । ಬಾಹೂನ್ ಪೂಜಯಾಮಿ ॥ ಓಂ ಶ್ರೀ ಸತ್ಯಕ್ಷಮಾಯ ನಮಃ। ಹಸ್ತಾನ್ ಪೂಜಯಾಮಿ ॥ ಓಂ ಶ್ರೀ ಸತ್ಯಸಂತುಷ್ಟಾಯ ನಮಃ । ಕಂಠಂ ಪೂಜಯಾಮಿ ॥ ಓಂ ಶ್ರೀ ಸತ್ಯವೇದ್ಯಾಯ ನಮಃ । ವದನಂ ಪೂಜಯಾಮಿ ॥ ಓಂ ಶ್ರೀ ಸತ್ಯಾಚ್ಯುತಾಯ ನಮಃ । ನಾಸಿಕಾಂ ಪೂಜಯಾಮಿ ॥ ಓಂ ಶ್ರೀ ಸತ್ಯಧರ್ಮಾಯ ನಮಃ । ಶ್ರೋತ್ರೇ ಪೂಜಯಾಮಿ ॥ ಓಂ ಶ್ರೀ ಸತ್ಯಪೂರ್ಣಾಯ ನಮಃ । ನೇತ್ರೇ ಪೂಜಯಾಮಿ ॥ ಓಂ ಶ್ರೀ ಸತ್ಯೌಷಧಾಯ ನಮಃ । ಭ್ರುವೌ ಪೂಜಯಾಮಿ ॥ ಓಂ ಶ್ರೀ ಸತ್ಯನಂದಾಯ ನಮಃ। ಭ್ರೂಮಧ್ಯಂ ಪೂಜಯಾಮಿ ॥ ಓಂ ಶ್ರೀ ಸತ್ಯವಪುಷೇ ನಮಃ । ಲಲಾಟಂ ಪೂಜಯಾಮಿ॥ ಓಂ ಶ್ರೀ ಸತ್ಯಗ್ರಹರೂಪಿಣೇ ನಮಃ । ಶಿರಃ ಪೂಜಯಾಮಿ ॥ ಓಂ ನಮೋ ನಾರಾಯಣಾಯ । ಮನುನಾಮಕ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀ ಮಹಾಲಕ್ಷ್ಮೀಸಮೇತ ಶ್ರೀಸತ್ಯನಾರಾಯಣಾಯ ನಮಃ । ಸರ್ವಾಂಗಾನಿ ಪೂಜಯಾಮಿ॥

ಅಥ ಪತ್ರಪೂಜಾ- ಓಂ ಶ್ರೀ ಸತ್ಯದೇವಾಯ ನಮಃ । ತುಲಸೀಪತ್ರಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯಾತ್ಮನೇ ನಮಃ । ಜಾಜೀಪತ್ರಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯನಿಧಯೇ ನಮಃ । ಚಂಪಕಪತ್ರಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯಸಂಕಲ್ಪಾಯ ನಮಃ । ಬಿಲ್ವಪತ್ರಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯಾಧೀಶಾಯ ನಮಃ । ದೂರ್ವಾಯುಗ್ಮಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯರೂಪಾಯ ನಮಃ । ಸೇವಂತಿಕಾ ಪತ್ರಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯಸೇವ್ಯಾಯ ನಮಃ । ಮರುವಕಪತ್ರಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯೌಷಧಾಯ ನಮಃ । ದಮನಪತ್ರಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯೋದರಾಯ ನಮಃ । ಕರವೀರಪತ್ರಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯಧೈರ್ಯಾಯ ನಮಃ । ವಿಷ್ಣುಕ್ರಾಂತಪತ್ರಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯಕಾಮಾಯ ನಮಃ । ಮಾಚೀಪತ್ರಂ ಸಮರ್ಪಯಾಮಿ॥ ಓಂ ಶ್ರೀ ಸತ್ಯೇಷ್ಟಾಯ ನಮಃ । ಮಲ್ಲಿಕಾಪತ್ರಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯಪರಾಯಣಾಯ ನಮಃ । ಇರುವಂತಿಕಾಪತ್ರಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯಶೌರ್ಯಾಯ ನಮಃ । ಅಪಾಮಾರ್ಗಪತ್ರಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯದಕ್ಷಾಯ ನಮಃ । ಪಾರಿಜಾತಪತ್ರಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯಸಂತುಷ್ಟಾಯ ನಮಃ । ದಾಡಿಮೀ ಪತ್ರಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯದೇವಾಯ ನಮಃ । ಬದರೀಪತ್ರಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯಾಚ್ಯುತಾಯ ನಮಃ । ದೇವದಾರುಪತ್ರಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯಧರ್ಮಾಯ ನಮಃ । ಶಮೀಪತ್ರಂ ಸಮರ್ಪಯಾಮಿ॥ ಓಂ ಶ್ರೀ ಸತ್ಯಪೂರ್ಣಾಯ ನಮಃ । ಚೂತಪತ್ರಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯೈಶ್ವರ್ಯಾಯ ನಮಃ । ಆಮಲಕಪತ್ರಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯಸಂಧಾಯ ನಮಃ । ವಟಪತ್ರಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯವಪುಷೇ ನಮಃ । ಕಮಲಪತ್ರಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯಗ್ರಹರೂಪಿಣೇ ನಮಃ । ವೇಣುಪತ್ರಂ ಸಮರ್ಪಯಾಮಿ ॥ ಓಂ ನಮೋ ನಾರಾಯಣಾಯ । ಮನುನಾಮಕ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಮಹಾಲಕ್ಷ್ಮೀಸಮೇತ ಶ್ರೀ ಸತ್ಯನಾರಾಯಣ ಸ್ವಾಮಿನೇ ನಮಃ । ನಾನಾ ವಿಧ ಪತ್ರಾಣಿ ಸಮರ್ಪಯಾಮಿ ॥

ಅಥ ಪುಷ್ಪಪೂಜಾ – ಓಂ ಶ್ರೀ ಸತ್ಯದೇವಾಯ ನಮಃ । ಕರವೀರಪುಷ್ಪಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯಾತ್ಮನೇ ನಮಃ । ಜಾಜೀ ಪುಷ್ಪಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯನಿಧಯೇ ನಮಃ । ಚಂಪಕ ಪುಷ್ಪಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯಸಂಕಲ್ಪಾಯ ನಮಃ । ವಕುಳಪುಷ್ಪಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯಾಧೀಶಾಯ ನಮಃ । ಶತಪತ್ರಪುಷ್ಪಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯರೂಪಾಯ ನಮಃ । ಕಲ್ಹಾರ ಪುಷ್ಪಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯಸೇವ್ಯಾಯ ನಮಃ । ಸೇವಂತಿಕಾ ಪುಷ್ಪಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯವರ್ಯಾಯ ನಮಃ । ಮಲ್ಲಿಕಾಪುಷ್ಪಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯೋದರಾಯ ನಮಃ । ಇರುವಂತಿಕಾಪುಷ್ಪಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯಧೈರ್ಯಾಯ ನಮಃ । ಗಿರಿಕರ್ಣಿಕಾ ಪುಷ್ಪಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯಕಾಮಾಯ ನಮಃ । ಅಸಿತ ಪುಷ್ಪಂ ಸಮರ್ಪಯಾಮಿ॥ ಓಂ ಶ್ರೀ ಸತ್ಯೇಷ್ಟಾಯ ನಮಃ । ಪಾರಿಜಾತಪುಷ್ಪಂ ಸಮರ್ಪಯಾಮಿ ॥ ಓಂ ಶ್ರೀ

ಸತ್ಯಪರಾಯಣಾಯ ನಮಃ । ಪುನ್ನಾಗಪುಷ್ಪಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯಶೌರ್ಯಾಯ ನಮಃ । ಕುಂದಪುಷ್ಪಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯದಕ್ಷಾಯ ನಮಃ । ಮಾಲತೀ ಪುಷ್ಪಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯಸಂತುಷ್ಟಾಯ ನಮಃ । ಕೇತಕೀಪುಷ್ಪಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯವೇದಾಯ ನಮಃ । ಮಂದಾರಪುಷ್ಪಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯಾಚ್ಯುತಾಯ ನಮಃ । ಪಾಟಲೀ ಪುಷ್ಪಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯಧರ್ಮಾಯ ನಮಃ । ಅಶೋಕಪುಷ್ಪಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯಪೂರ್ಣಾಯ ನಮಃ । ಪೂಗಪುಷ್ಪಂ ಸಮರ್ಪಯಾಮಿ॥ ಓಂ ಶ್ರೀ ಸತ್ಯೌಷಧಾಯ ನಮಃ । ದಾಡಿಮೀ ಪುಷ್ಪಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯನಂದಾಯ ನಮಃ । ದೇವದಾರು ಪುಷ್ಪಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯವಪುಷೇ ನಮಃ । ಸುಗಂಧರಾಜಪುಷ್ಪಂ ಸಮರ್ಪಯಾಮಿ ॥ ಓಂ ಶ್ರೀ ಸತ್ಯಗ್ರಹರೂಪಿಣೇ ನಮಃ। ಕಮಲಪುಷ್ಪಂ ಸಮರ್ಪಯಾಮಿ ॥ ಓಂ ನಮೋ ನಾರಾಯಣಾಯ । ಮನುನಾಮಕ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಮಹಾಲಕ್ಷ್ಮೀಸಮೇತ ಶ್ರೀ ಸತ್ಯನಾರಾಯಣ ದೇವಾಯ ನಮಃ । ನಾನಾವಿಧ ಪರಿಮಳಸುಗಂಧ ಪುಷ್ಪಾಣಿ ಸಮರ್ಪಯಾಮಿ ॥

ಅಥ ನಾಮಾವಳೀ ಪೂಜಾ –(ಮಂತ್ರಾಕ್ಷತೆ) ಓಂ ಶ್ರೀ ಕೇಶವಾಯ ನಮಃ । ಓಂ ಶ್ರೀ ನಾರಾಯಣಾಯ ನಮಃ । ಓಂ ಶ್ರೀ ಮಾಧವಾಯ ನಮಃ । ಓಂ ಶ್ರೀ ಗೋವಿಂದಾಯ ನಮಃ । ಓಂ ಶ್ರೀ ವಿಷ್ಣವೇ ನಮಃ । ಓಂ ಶ್ರೀ ಮಧುಸೂದನಾಯ ನಮಃ । ಓಂ ಶ್ರೀ ತ್ರಿವಿಕ್ರಮಾಯ ನಮಃ । ಓಂ ಶ್ರೀ ವಾಮನಾಯ ನಮಃ । ಓಂ ಶ್ರೀ ಶ್ರೀಧರಾಯ ನಮಃ। ಓಂ ಶ್ರೀ ಹೃಷೀಕೇಶಾಯ ನಮಃ । ಓಂ ಶ್ರೀ ಪದ್ಮನಾಭಾಯ ನಮಃ । ಓಂ ಶ್ರೀ ದಾಮೋದರಾಯ ನಮಃ । ಓಂ ಶ್ರೀ ಸಂಕರ್ಷಣಾಯ ನಮಃ । ಓಂ ಶ್ರೀ ವಾಸುದೇವಾಯ ನಮಃ । ಓಂ ಶ್ರೀ ಪ್ರದ್ಯುಮ್ನಾಯ ನಮಃ । ಓಂ ಶ್ರೀ ಅನಿರುದ್ಧಾಯ ನಮಃ । ಓಂ ಶ್ರೀ ಪುರುಷೋತ್ತಮಾಯ ನಮಃ । ಓಂ ಶ್ರೀ ಅಧೋಕ್ಷಜಾಯ ನಮಃ । ಓಂ ಶ್ರೀ ನಾರಸಿಂಹಾಯ ನಮಃ । ಓಂ ಶ್ರೀ ಅಚ್ಯುತಾಯ ನಮಃ । ಓಂ ಶ್ರೀ ಜನಾರ್ದನಾಯ ನಮಃ । ಓಂ ಶ್ರೀ ಉಪೇಂದ್ರಾಯ ನಮಃ । ಓಂ ಶ್ರೀ ಹರಯೇ ನಮಃ । ಓಂ ಶ್ರೀ ಕೃಷ್ಣಾಯ ನಮಃ ॥ ಓಂ ಮತ್ಸ್ಯಾಯ ನಮಃ । ಓಂ ಕೂರ್ಮಾಯ ನಮಃ । ಓಂ ವರಾಹಾಯ ನಮಃ । ಓಂ ನಾರಸಿಂಹಾಯ ನಮಃ । ಓಂ ವಾಮನಾಯ ನಮಃ । ಓಂ ಭಾರ್ಗವಾಯ ನಮಃ । ಓಂ ಸೀತಾರಾಮಚಂದ್ರಾಯ ನಮಃ । ಓಂ ಕೃಷ್ಣಾಯ ನಮಃ । ಓಂ ಬುದ್ಧಾಯ ನಮಃ । ಓಂ ಕಲ್ಕಿನೇ ನಮಃ ॥

ಅಥ ಅಷ್ಟೋತ್ತರ ಶತನಾಮಾವಳಿ ಪೂಜಾ – ಓಂ ಶ್ರೀ ಸತ್ಯದೇವಾಯ ನಮಃ । ಓಂ ಶ್ರೀ ಸತ್ಯಾತ್ಮನೇ ನಮಃ । ಓಂ ಶ್ರೀ ಸತ್ಯಭೂತಾಯ ನಮಃ । ಓಂ ಶ್ರೀ ಸತ್ಯಪುರುಷಾಯ ನಮಃ । ಓಂ ಶ್ರೀ ಸತ್ಯನಾಥಾಯ ನಮಃ । ಓಂ ಶ್ರೀ ಸತ್ಯಸಾಕ್ಷಿಣೇ ನಮಃ । ಓಂ ಶ್ರೀ ಸತ್ಯಯೋಗಾಯ ನಮಃ । ಓಂ ಶ್ರೀ ಸತ್ಯಜ್ಞಾನಾಯ ನಮಃ । ಓಂ ಶ್ರೀ ಸತ್ಯಜ್ಞಾನಪ್ರಿಯಾಯ ನಮಃ । ಓಂ ಶ್ರೀ ಸತ್ಯನಿಧಯೇ ನಮಃ ।(೧೦) ಓಂ ಶ್ರೀ ಸತ್ಯಸಂಭವಾಯ ನಮಃ । ಓಂ ಶ್ರೀ ಸತ್ಯಪ್ರಭವೇ ನಮಃ । ಓಂ ಶ್ರೀ ಸತ್ಯೇಶ್ವರಾಯ ನಮಃ । ಓಂ ಶ್ರೀ ಸತ್ಯಕರ್ಮಿಣೇ ನಮಃ । ಓಂ ಶ್ರೀ ಸತ್ಯಪವಿತ್ರಾಯ ನಮಃ । ಓಂ ಶ್ರೀ

ಸತ್ಯಮಂಗಳಾಯ ನಮಃ । ಓಂ ಶ್ರೀ ಸತ್ಯಗರ್ಭಾಯ ನಮಃ । ಓಂ ಶ್ರೀ ಸತ್ಯಪ್ರಜಾಪತಯೇ ನಮಃ । ಓಂ ಶ್ರೀ ಸತ್ಯವಿಕ್ರಮಾಯ ನಮಃ । ಓಂ ಶ್ರೀ ಸತ್ಯಸಿದ್ಧಾಯ ನಮಃ (೨೦)। ಓಂ ಶ್ರೀ ಸತ್ಯಾಚ್ಯುತಾಯ ನಮಃ । ಓಂ ಶ್ರೀ ಸತ್ಯವೀರಾಯ ನಮಃ । ಓಂ ಶ್ರೀ ಸತ್ಯಬೋಧಾಯ ನಮಃ । ಓಂ ಶ್ರೀ ಸತ್ಯಧರ್ಮಾಯ ನಮಃ । ಓಂ ಶ್ರೀ ಸತ್ಯಾಗ್ರಜಾಯ ನಮಃ । ಓಂ ಶ್ರೀ ಸತ್ಯಸಂತುಷ್ಟಾಯ ನಮಃ । ಓಂ ಶ್ರೀ ಸತ್ಯವರಾಹಾಯ ನಮಃ । ಓಂ ಶ್ರೀ ಸತ್ಯಪರಾಕ್ರಮಾಯ ನಮಃ । ಓಂ ಶ್ರೀ ಸತ್ಯಪೂರ್ಣಾಯ ನಮಃ । ಓಂ ಶ್ರೀ ಸತ್ಯೌಷಧಾಯ ನಮಃ (೩೦)। ಓಂ ಶ್ರೀ ಸತ್ಯಶಾಶ್ವತಾಯ ನಮಃ । ಓಂ ಶ್ರೀ ಸತ್ಯಪ್ರವರ್ಧನಾಯ ನಮಃ । ಓಂ ಶ್ರೀ ಸತ್ಯವಿಭವೇ ನಮಃ । ಓಂ ಶ್ರೀ ಸತ್ಯಜ್ಯೇಷ್ಠಾಯ ನಮಃ । ಓಂ ಶ್ರೀ ಸತ್ಯಶ್ರೇಷ್ಠಾಯ ನಮಃ । ಓಂ ಶ್ರೀ ಸತ್ಯವಿಕ್ರಮಿಣೇ ನಮಃ । ಓಂ ಶ್ರೀ ಸತ್ಯಧನ್ವಿನೇ ನಮಃ । ಓಂ ಸತ್ಯಮೇಧಾಯ ನಮಃ । ಓಂ ಶ್ರೀ ಸತ್ಯಾಧೀಶಾಯ ನಮಃ । ಓಂ ಶ್ರೀ ಸತ್ಯಕ್ರತವೇ ನಮಃ ।(೪೦) ಓಂ ಶ್ರೀ ಸತ್ಯಕಲಾಯ ನಮಃ । ಓಂ ಶ್ರೀ ಸತ್ಯವತ್ಸಲಾಯ ನಮಃ । ಓಂ ಶ್ರೀ ಸತ್ಯವಸವೇ ನಮಃ । ಓಂ ಶ್ರೀ ಸತ್ಯಮೋದಾಯ ನಮಃ। ಓಂ ಶ್ರೀ ಸತ್ಯುರುದ್ರಾಯ ನಮಃ । ಓಂ ಶ್ರೀ ಸತ್ಯಬ್ರಹ್ಮಣೇ ನಮಃ । ಓಂ ಶ್ರೀ ಸತ್ಯಾಮೃತಾಯ ನಮಃ । ಓಂ ಶ್ರೀ ಸತ್ಯವೇದಾಂಗಾಯ ನಮಃ । ಓಂ ಶ್ರೀ ಸತ್ಯಚತುರಾತ್ಮನೇ ನಮಃ । ಓಂ ಶ್ರೀ ಸತ್ಯಭೋಕ್ತ್ರೇ ನಮಃ ।(೫೦) ಓಂ ಶ್ರೀ ಸತ್ಯಶುಚಯೇ ನಮಃ । ಓಂ ಶ್ರೀ ಸತ್ಯಾರ್ಜಿತಾಯ ನಮಃ । ಓಂ ಶ್ರೀ ಸತ್ಯೇಂದ್ರಾಯ ನಮಃ । ಓಂ ಶ್ರೀ ಸತ್ಯಸಂಗಾಯ ನಮಃ । ಓಂ ಶ್ರೀ ಸತ್ಯಸ್ವರ್ಗಾಯ ನಮಃ । ಓಂ ಶ್ರೀ ಸತ್ಯನಿಯಮಾಯ ನಮಃ । ಓಂ ಶ್ರೀ ಸತ್ಯವೇದಾಯ ನಮಃ । ಓಂ ಶ್ರೀ ಸತ್ಯವೇದ್ಯಾಯ ನಮಃ । ಓಂ ಶ್ರೀ ಸತ್ಯಪೀಯೂಷಾಯ ನಮಃ । ಓಂ ಶ್ರೀ ಸತ್ಯಮಾಯಾಯ ನಮಃ ।(೬೦) ಓಂ ಶ್ರೀ ಸತ್ಯಮೋಹಾಯ ನಮಃ । ಓಂ ಶ್ರೀ ಸತ್ಯಸುರಾನಂದಾಯ ನಮಃ । ಓಂ ಶ್ರೀ ಸತ್ಯಸಾಗರಾಯ ನಮಃ । ಓಂ ಶ್ರೀ ಸತ್ಯತಪಸೇ ನಮಃ । ಓಂ ಶ್ರೀ ಸತ್ಯಸಿಂಹಾಯ ನಮಃ। ಓಂ ಶ್ರೀ ಸತ್ಯಮೃಗಾಯ ನಮಃ । ಓಂ ಶ್ರೀ ಸತ್ಯಲೋಕಪಾಲಕಾಯ ನಮಃ । ಓಂ ಶ್ರೀ ಸತ್ಯಸ್ಥಿರಾಯ ನಮಃ । ಓಂ ಶ್ರೀ ಸತ್ಯೌಷಧಾಯ ನಮಃ । ಓಂ ಶ್ರೀ ಸತ್ಯದಿಕ್ಪಾಲಕಾಯ ನಮಃ (೭೦)। ಓಂ ಶ್ರೀ ಸತ್ಯಧನುರ್ಧರಾಯ ನಮಃ । ಓಂ ಶ್ರೀ ಸತ್ಯಭುಜಾಯ ನಮಃ। ಓಂ ಶ್ರೀ ಸತ್ಯವಾಕ್ಯಾಯ ನಮಃ । ಓಂ ಶ್ರೀ ಸತ್ಯಗುರವೇ ನಮಃ । ಓಂ ಶ್ರೀ ಸತ್ಯನ್ಯಾಯಾಯ ನಮಃ । ಓಂ ಶ್ರೀ ಸತ್ಯಸಾಕ್ಷಿಣೇ ನಮಃ । ಓಂ ಶ್ರೀ ಸತ್ಯಸಂವೃತಾಯ ನಮಃ । ಓಂ ಶ್ರೀ ಸತ್ಯಸಂಪ್ರದಾಯಾಯ ನಮಃ । ಓಂ ಶ್ರೀ ಸತ್ಯವಹ್ನಯೇ ನಮಃ । ಓಂ ಶ್ರೀ ಸತ್ಯವಾಯವೇ ನಮಃ (೮೦) ಓಂ ಶ್ರೀ ಸತ್ಯಶಿಖರಾಯ ನಮಃ । ಓಂ ಶ್ರೀ ಸತ್ಯಾನಂದಾಯ ನಮಃ । ಓಂ ಶ್ರೀಸತ್ಯಾಧಿರಾಜಾಯ ನಮಃ । ಓಂ ಶ್ರೀ ಸತ್ಯಶ್ರೀಪಾದಾಯ ನಮಃ । ಓಂ ಶ್ರೀ ಸತ್ಯಗುಹ್ಯಾಯ ನಮಃ । ಓಂ ಶ್ರೀ ಸತ್ಯೋದರಾಯ ನಮಃ । ಓಂ ಶ್ರೀ ಸತ್ಯಹೃದಯಾಯ ನಮಃ । ಓಂ ಶ್ರೀ ಸತ್ಯಕಮಲಾಯ ನಮಃ । ಓಂ ಶ್ರೀ ಸತ್ಯನಾಳಾಯ ನಮಃ । ಓಂ ಶ್ರೀ ಸತ್ಯಹಸ್ತಾಯ ನಮಃ ।(೯೦) ಓಂ ಶ್ರೀ ಸತ್ಯಬಾಹವೇ ನಮಃ । ಓಂ ಶ್ರೀ ಸತ್ಯಮುಖಾಯ ನಮಃ । ಓಂ ಶ್ರೀ ಸತ್ಯಜಿಹ್ವಾಯ ನಮಃ । ಓಂ ಶ್ರೀ ಸತ್ಯದಂಷ್ಟ್ರಾಯ ನಮಃ । ಓಂ ಶ್ರೀ ಸತ್ಯನಾಸಿಕಾಯ ನಮಃ । ಓಂ ಶ್ರೀ ಸತ್ಯಶ್ರೋತ್ರಾಯ ನಮಃ । ಓಂ ಶ್ರೀ ಸತ್ಯಚಕ್ಷುಷೇ ನಮಃ । ಓಂ ಶ್ರೀ ಸತ್ಯಶಿರಸೇ ನಮಃ । ಓಂ ಶ್ರೀ ಸತ್ಯಮುಕುಟಾಯ ನಮಃ । ಓಂ ಶ್ರೀ

ಸತ್ಯಾಂಬರಾಯ ನಮಃ ।(೧೦೦) ಓಂ ಶ್ರೀ ಸತ್ಯಾಭರಣಾಯ ನಮಃ। ಓಂ ಶ್ರೀ ಸತ್ಯಾಯುಧಾಯ ನಮಃ । ಓಂ ಶ್ರೀ ಸತ್ಯಶ್ರೀವಲ್ಲಭಾಯ ನಮಃ । ಓಂ ಶ್ರೀ ಸತ್ಯಗುಪ್ತಾಯ ನಮಃ । ಓಂ ಶ್ರೀ ಸತ್ಯಪುಷ್ಕರಾಯ ನಮಃ । ಓಂ ಶ್ರೀ ಸತ್ಯದೃಢಾಯ ನಮಃ । ಓಂ ಶ್ರೀ ಸತ್ಯಭಾಮಾರತಾಯ ನಮಃ । ಓಂ ಶ್ರೀ ಸತ್ಯಗ್ರಹರೂಪಿಣೇ ನಮಃ (೧೦೮)। ಓಂ ಶ್ರೀ ಮನುನಾಮಕ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಮಹಾಲಕ್ಷ್ಮೀಸಮೇತಾಯ ಭಗವತೇ ಶ್ರೀ ಸತ್ಯನಾರಾಯಣಾಯ ನಮಃ । ಅಷ್ಟೋತ್ತರಶತನಾಮಪೂಜಾಂ ಸಮರ್ಪಯಾಮಿ ॥

೧೧. ಧೂಪಮ್ - (ಪೌ) ವನಸ್ಪತ್ಯುದ್ಭವೋ ದಿವ್ಯೋ ಗಂಧಾಢ್ಯೋ ಗಂಧ ಉತ್ತಮಃ। ಆಘ್ರೇಯಃ ಸರ್ವದೇವಾನಾಂ ಧೂಪೋಽಯಂ ಪ್ರತಿಗೃಹ್ಯತಾಮ್ ॥

(ಪು) ಓಂ ॥ ಯತ್ ಪುರುಷಂ ವ್ಯದಧುಃ । ಕತಿಧಾ ವ್ಯಕಲ್ಪಯನ್ ॥ ಮುಖಂ ಕಿಮಸ್ಯ ಕೌ ಬಾಹೂ । ಕಾವೂರೂ ಪಾದಾವುಚ್ಯೇತೆ ॥೧೨॥

(ಶ್ರೀ) ಓಂ ॥ ಕರ್ದಮೇನ ಪ್ರಜಾ ಭೂತಾ ಮಯಿ ಸಂಭವ ಕರ್ದಮ । ಶ್ರಿಯಂ ವಾಸಯ ಮೇ ಕುಲೇ ಮಾತರಂ ಪದ್ಮಮಾಲಿನೀಮ್ ॥೧೧॥

ಓಂ ನಮೋ ನಾರಾಯಣಾಯ । ಮನುನಾಮಕ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀ ಮಹಾಲಕ್ಷ್ಮೀಸಮೇತ ಶ್ರೀ ಸತ್ಯನಾರಾಯಣಸ್ವಾಮಿನೇ ನಮಃ । ಧೂಪಮಾಘ್ರಾಪಯಾಮಿ ।

ಏಕಾರ್ತಿಕ್ಯ ದೀಪಮ್ - (ಮೂರು ಬತ್ತಿಯಿಂದ ಅಥವಾ ಕರ್ಪೂರದಿಂದ)

(ಪೌ) ಸಾಜ್ಯಂ ತ್ರಿವರ್ತಿಸಂಯುಕ್ತಂ ವಹ್ನಿನಾ ಯೋಜಿತಂ ಮಯಾ । ಗೃಹಾಣ ಮಂಗಳಂ ದೀಪಂ ತ್ರೈಲೋಕ್ಯತಿಮಿರಾಪಹ ॥ ಮನುನಾಮಕ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀ ಸತ್ಯನಾರಾಯಣಸ್ವಾಮಿನೇ ನಮಃ। ಏಕಾರ್ತಿಕ್ಯ ದೀಪಂ ಸಮರ್ಪಯಾಮಿ ॥

೧೨. ದೀಪಮ್ - (ಮುಂದಿನ ಮಂತ್ರಗಳಿಂದ ದೀಪಗಳನ್ನು ಹಚ್ಚಬೇಕು)

(ಪೌ) ಭಕ್ತ್ಯಾ ದೀಪಂ ಪ್ರಯಚ್ಛಾಮಿ ದೇವಾಯ ಪರಮಾತ್ಮನೇ । ತ್ರಾಹಿ ಮಾಂ ನರಕಾದ್ ಘೋರಾತ್ ದಿವ್ಯಜ್ಯೋತಿರ್ ನಮೋಸ್ತು ತೇ ॥

(ಪು) ಓಂ ॥ ಬ್ರಾಹ್ಮಣೋಽಸ್ಯ ಮುಖಮಾಸೀತ್ । ಬಾಹೂ ರಾಜನ್ಯಃ ಕೃತಃ । ಊರೂ ತದಸ್ಯ ಯದ್ ವೈಶ್ಯಃ । ಪದ್ಭ್ಯಾಗ್‍ಂ ಶೂದ್ರೋ ಅಜಾಯತ ॥೧೩॥

(ಶ್ರೀ) ಆಪಃ ಸೃಜಂತು ಸ್ನಿಗ್ಧಾನಿ ಚಿಕ್ಲೀಥ ವಸ ಮೇ ಗೃಹೇ । ನಿಚ ದೇವೀಂ ಮಾತರಂ ಶ್ರಿಯಂ ವಾಸಯ ಮೇ ಕುಲೇ ॥೧೨॥

ಮನುನಾಮಕ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಸತ್ಯನಾರಾಯಣ ಸ್ವಾಮಿನೇ ನಮಃ । ದೀಪಂ ದರ್ಶಯಾಮಿ ॥

೧೩. ನೈವೇದ್ಯಕಲಾಪಃ - ನೈವೇದ್ಯಸಮರ್ಪಣ ಕಾಲೇ ಯಥಾಶಕ್ತಿದ್ವಾದಶಸ್ತೋತ್ರಂ ಪಠೇತ್ ।

ದ್ವಾದಶಸ್ತೋತ್ರಮ್ - ವಂದೇ ವಂದ್ಯಂ ಸದಾನಂದಂ ವಾಸುದೇವಂ ನಿರಂಜನಮ್। ಇಂದಿರಾಪತಿಮಾದ್ಯಾದಿ ವರದೇಶವರಪ್ರದಮ್ ॥ (ಇತ್ಯಾದಿ)

ನೈವೇದ್ಯಕ್ಕೆ ಸಿದ್ಧತೆ ಮಾಡುವ ಕ್ರಮ - (ದೇವರ ಬಲಗಡೆಗೆ ಎರಡು ಚೌಕನೆಯ ಮಂಡಲಗಳನ್ನು ಮಾಡಿ, ರಂಗೋಲಿ ಹಾಕಿ ಶ್ರೀಃ ಬೀಜ ಬರೆದು, ಹಣ್ಣು-ಹಂಪಲು ತಾಂಬೂಲಾದಿಗಳನ್ನೂ, ಸಪಾದ ಭಕ್ಷ್ಯವನ್ನು ಒಂದು ಮಂಡಲದಲ್ಲೂ, ಮುಸುರೆಯ ಪದಾರ್ಥಗಳನ್ನು ಇನ್ನೊಂದು ಮಂಡಲದಲ್ಲೂ ಇಟ್ಟು ಅಭಿಘಾರ ಮಾಡಿ, ಶಂಖಕ್ಕೆ ನೀರು ಹಾಕಿ ಮೂಲ ಮಂತ್ರದಿಂದ (ಎಂಟು ಸಾರಿ) ಅಭಿಮಂತ್ರಿಸಿ ನೈವೇದ್ಯದ ಮೇಲೆ ಮುಂದಿನ ವಿಷ್ಣುಗಾಯತ್ರಿಯಿಂದ ಪ್ರೋಕ್ಷಿಸಬೇಕು)

ಓಂ ॥ ನಾರಾಯಣಾಯ ವಿದ್ಮಹೇ ವಾಸುದೇವಾಯ ಧೀಮಹಿ । ತನ್ನೋ ವಿಷ್ಣುಃ ಪ್ರಚೋದಯಾತ್ ॥ (ಅನಂತರ) ಸತ್ಯಂ ತ್ವರ್ತೇನ ಪರಿಷಿಂಚಾಮಿ ॥

ಅಮೃತೀಕರಣಾರ್ಥಂ ಧೇನುಮುದ್ರಾಂ ಪ್ರದರ್ಶಯಾಮಿ । ಪವಿತ್ರೀಕರಣಾರ್ಥಂ ಶಂಖ ಮುದ್ರಾಂ ಪ್ರದರ್ಶಯಾಮಿ । ಸಂರಕ್ಷಣಾರ್ಥಂ ಚಕ್ರಮುದ್ರಾಂ ಪ್ರದರ್ಶಯಾಮಿ। ಶೈತಲ್ಯಾರ್ಥಂ ಚಂದ್ರಮುದ್ರಾಂ ಪ್ರದರ್ಶಯಾಮಿ । ನಿರ್ವಿಷೀಕರಣಾರ್ಥಂ ತಾರ್ಕ್ಷ್ಯಮುದ್ರಾಂ ಪ್ರದರ್ಶಯಾಮಿ । ಅಭಿವೃದ್ಧ್ಯರ್ಥಂ ಮೇರುಮುದ್ರಾಂ ಪ್ರದರ್ಶಯಾಮಿ ॥ (ಶಂಖಕ್ಕೆ ಪುನಃ ನೀರು ಹಾಕಿ, ಕೈಮುಗಿದುಕೊಂಡು) ಸುಧಾರಸಂ ಸುವಿಪುಲಂ ಆಪೋಶನಮಿದಂ ತವ । ಗೃಹಾಣ ತ್ವಂ ಸುರಶ್ರೇಷ್ಠ ಯಥೇಷ್ಟಮುಪಭುಜ್ಯತಾಮ್ ॥ (ಎಂದು ಪ್ರಾರ್ಥಿಸಿ) ಅಮೃತೋಪಸ್ತರಣಮಸಿ ಸ್ವಾಹಾ॥

(ಎಂದು ಹೇಳಿ ನೈವೇದ್ಯಕ್ಕಿಟ್ಟ ಪದಾರ್ಥಗಳ ಮೇಲೆ ಪ್ರೋಕ್ಷಿಸಿ, ಬೇರೆ ಒಂದು ತಟ್ಟೆಯಲ್ಲಿ ಅಥವಾ ಅರ್ಘ್ಯಪಾತ್ರೆಯಲ್ಲಿ ಕೆಳಗಿನ ಮಂತ್ರಗಳಿಂದ ಆರು ಸರಿ ಪ್ರಾಣಾಹುತಿ ಕೊಡಬೇಕು).

ಓಂ ಪ್ರಾಣಾಯ ಸ್ವಾಹಾ । ಪ್ರಾಣಾತ್ಮನೇ ಶ್ರೀ ಶಾಂತಿಪತಿ ಅನಿರುದ್ಧಾಯೇದಂ ನ ಮಮ ॥ ಅಪಾನಾಯ ಸ್ವಾಹಾ । ಅಪಾನಾತ್ಮನೇ ಶ್ರೀ ಕೃತಿಪತಿ ಪ್ರದ್ಯುಮ್ನಾಯೇದಂ ನ ಮಮ ॥ ಓಂ ವ್ಯಾನಾಯ ಸ್ವಾಹಾ । ವ್ಯಾನಾತ್ಮನೇ ಶ್ರೀ ಜಯಾಪತಿ ಸಂಕರ್ಷಣಾಯೇದಂ ನ ಮಮ ॥ ಓಂ ಉದಾನಾಯ ಸ್ವಾಹಾ । ಉದಾನಾತ್ಮನೇ ಶ್ರೀ ಮಾಯಾಪತಿ ವಾಸುದೇವಾಯೇದಂ ನ ಮಮ ॥ ಓಂ ಸಮಾನಾಯ ಸ್ವಾಹಾ । ಸಮಾನಾತ್ಮನೇ ಶ್ರೀ ಲಕ್ಷ್ಮೀಪತಿ ನಾರಾಯಣಾಯೇದಂ ನ ಮಮ ॥ ಓಂ ಬ್ರಹ್ಮಣೇ ಸ್ವಾಹಾ । ಭಗವತೇ ಪರಬ್ರಹ್ಮಣ ಇದಂ ನ ಮಮ ॥

(ಆಮೇಲೆ ಮುಖಕ್ಕೆ ಮುಸುಕು ಹಾಕಿಕೊಂಡು ಭಗವಂತ ಭೋಜನ ಮಾಡುತ್ತಾನೆಂದು ಧ್ಯಾನಿಸುತ್ತಾ ಈ ಋಕ್ಕುಗಳನ್ನೂ ಮಂತ್ರಗಳನ್ನು ಹೇಳಿಕೊಳ್ಳಬೇಕು)

(ಪು) ಓಂ ॥ ಚಂದ್ರಮಾ ಮನಸೋ ಜಾತಃ । ಚಕ್ಷೋಃ ಸೂರ್ಯೋ ಅಜಾಯತ । ಮುಖಾದಿಂದ್ರಶ್ಚಾಗ್ನಿಶ್ಚ । ಪ್ರಾಣಾದ್ವಾಯುರಜಾಯತ ॥೧೪॥

(ಶ್ರೀ) ಆರ್ದ್ರಾಂ ಪುಷ್ಕರಿಣೀಂ ಪುಷ್ಟಿಂ ಸುವರ್ಣಾಂ ಹೇಮಮಾಲಿನೀಮ್ । ಸೂರ್ಯಾಂ ಹಿರಣ್ಮಯೀಂ ಲಕ್ಷ್ಮೀಂ ಜಾತವೇದೋ ಮ ಆವಹ ॥೧೩॥

ಶ್ರೀನಿವಾಸ ನಮಸ್ತುಭ್ಯಂ ಮಹಾನ್ನೈವೇದ್ಯಮುತ್ತಮಮ್ । ಸಂಗ್ರಹಾಣ ಸುರಶ್ರೇಷ್ಠ ಕೃಪಯಾ ಭಕ್ತವತ್ಸಲ ॥ ರಂಭಾಫಲಂ ಘೃತಂ ಕ್ಷೀರಂ ಗೋಧೂಮಸ್ಯ ಚ ಚೂರ್ಣಕಮ್। ಶರ್ಕರಾಯುಕ್ತನೈವೇದ್ಯಂ ಸಪಾದಂ ಭಕ್ಷ್ಯಮುತ್ತಮಮ್ ॥

('ಭಕ್ಷ್ಯಂ ವಾಯುರ್ಜಗತ್ಪತಿಃ' ಎಂಬ ಪ್ರಮಾಣದಂತೆ ಸಪಾದಭಕ್ಷ್ಯವನ್ನು ಮುಖ್ಯಪ್ರಾಣದೇವರೇ ಮಾಡಿದ್ದಾರೆಂದೂ ಅದರಲ್ಲಿ ಸಂಕರ್ಷಣಮೂರ್ತಿಯ ರೂಪದಿಂದ ಭಗವಂತ ಅದನ್ನು ಸ್ವೀಕರಿಸುತ್ತಾನೆಂದೂ ಚಿಂತಿಸಬೇಕು.) ಮಧ್ಯೇ ಮಧ್ಯೇ ಪಾನೀಯಂ ಸಮರ್ಪಯಾಮಿ ಎಂದು ಒಂದು ಉದ್ಧರಣೆ ನೀರನ್ನು ಅರ್ಘ್ಯದ ಬಟ್ಟಲಿಗೆ ಹಾಕಿ 'ವಾಸುದೇವಸ್ತು ಚಾನ್ನಸ್ಥಃ' ಇತ್ಯಾದಿ ಅನುಸಂಧಾನ ಮಾಡಿಕೊಂಡು ಮುಸುಕು ತೆಗೆದು ಉತ್ತರಾಪೋಶನ ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸಬೇಕು.)

(**ಅನ್ನಾದಿಗಳಲ್ಲಿರುವ ಭಗವದ್ರೂಪಗಳು** - ಅನ್ನದಲ್ಲಿ - ವಾಸುದೇವ; ಭಕ್ಷ್ಯದಲ್ಲಿಸಂಕರ್ಷಣ; ಪಾಯಸದಲ್ಲಿ - ಪ್ರದ್ಯುಮ್ನ; ತುಪ್ಪದಲ್ಲಿ-ಅನಿರುದ್ಧ; ತರಕಾರಿಗಳಲ್ಲಿ ಗರುಡಧ್ವಜ; ತೊವ್ವೆಯಲ್ಲಿ - ಉಪೇಂದ್ರ; ಮಿಕ್ಕ ಎಲ್ಲದರಲ್ಲೂ - ನಾರಾಯಣ.)

ವಾಸುದೇವಸ್ತು ಚಾನ್ನಸ್ಥಃ ಭಕ್ಷ್ಯೇ ಸಂಕರ್ಷಣಃ ಸ್ಮೃತಃ । ಪ್ರದ್ಯುಮ್ನಃ ಪರಮಾನ್ನೇ ಚ ಅನಿರುದ್ಧೋ ಘೃತೇ ಸ್ಥಿತಃ । ಗರುಡಧ್ವಜಸ್ತು ಶಾಕೇಷು ಸೂಪೇ ತೂಪೇಂದ್ರ ಉಚ್ಯತೇ । ನಾರಾಯಣಸ್ತು ಸರ್ವತ್ರೇತ್ಯೇವಂ ಜ್ಞಾತ್ವಾ ನಿವೇದಯೇತ್ ॥

(**ಹರಿಕಥಾಮೃತಸಾರದ ಪದ್ಯ** - ವಾಸುದೇವನು ಅನ್ನದೊಳು ನಾ । ನಾ ಸುಭಕ್ಷ್ಯದಿ ಸಂಕರುಷಣ ಕೃ- । ತೀಶ ಪರಮಾನ್ನದೊಳು ಘೃತದೊಳಗಿಪ್ಪನನಿರುದ್ಧ ॥ ಆ ಸುಪರ್ಣಾಂಸಗನು ಸೂಪದಿ । ವಾಸವಾನುಜ ಶಾಕದೊಳು ಮೂ । ಲೇಶ ನಾರಾಯಣನು ಸರ್ವತ್ರದಲಿ ನೆಲೆಸಿಹನು ॥೧೦॥ ಈ ಪರಿಯಲರಿತುಂಬ ನರ ನಿ- । ತ್ಯೋಪವಾಸಿ ನಿರಾಮಯನು ನಿ । ಷ್ಪಾಪಿ ನಿತ್ಯ ಮಹತ್ಸುಯಜ್ಞಗಳಾಚರಿಸಿದವನು ॥ ಪೋಪದಿಪ್ಪುದು ಬಪ್ಪುದೆಲ್ಲ ರ- । ಮಾಪತಿಗಧಿಷ್ಠಾನವೆನ್ನು ಕೃ- । ಪಾಪಯೋನಿಧಿ ಮಾತನಾಲಿಸುವನು ಜನನಿಯಂತೆ ॥೧೨॥)

ಉತ್ತರಾಪೋಶನ ತೆಗೆದುಕೊಳ್ಳಲು ಪ್ರಾರ್ಥನೆ - ಮಹಾಲಕ್ಷ್ಮ್ಯಾ ದೀಯಮಾನಂ ಕರೇ ತೇ ದಕ್ಷಿಣೇಽನಘ । ಉತ್ತರಾಪೋಶನಂ ದಿವ್ಯಂ ಪಿಬದೇವ ರಮಾಪತೇ ॥

ಎಂದು ಪ್ರಾರ್ಥಿಸಿ ಶಂಖಕ್ಕೆ ಇನ್ನೂ ಸ್ವಲ್ಪ ನೀರು ಹಾಕಿಕೊಂಡು

ಓಂ ಅಮೃತಾಪಿಧಾನಮಸಿ ಸ್ವಾಹಾ । ಎಂದು ಹೇಳಿ ಉತ್ತರಾಪೋಶನಂ ಸಮರ್ಪಯಾಮಿ । ಹಸ್ತಪ್ರಕ್ಷಾಲನಂ ಸಮರ್ಪಯಾಮಿ । ಪಾದಪ್ರಕ್ಷಾಲನಂ ಸಮರ್ಪಯಾಮಿ । ದಂತಶೋಧನಂ ಸಮರ್ಪಯಾಮಿ ।.ದ್ವಾದಶ ಗಂಡೂಷಾನ್ ಸಮರ್ಪಯಾಮಿ । ಮುಖವಸ್ತ್ರಂ ಸಮರ್ಪಯಾಮಿ । ಪುನರಾಚಮನಂ ಸಮರ್ಪಯಾಮಿ॥ (ಎಂದು ಹೇಳಿ ಅರ್ಘ್ಯಪಾತ್ರೆಯಲ್ಲಿ ಹಾಕಬೇಕು)

೧೪. ತಾಂಬೂಲಮ್ - (ಪೌ) ಪೂಗೀಫಲ ಸಮಾಯುಕ್ತಂ (ಏಲಾಲವಂಗ ಸಂಯುಕ್ತಂ) ನಾಗವಲ್ಲೀ ದಳೈರ್ಯುತಮ್ । ಕರ್ಪೂರಚೂರ್ಣಸಂಯುಕ್ತಂ ತಾಂಬೂಲಂ ಪ್ರತಿಗೃಹ್ಯತಾಮ್ ॥

(ಪು) ಓಂ ॥ ನಾಭ್ಯಾ ಆಸೀದಂತರಿಕ್ಷಂ । ಶೀರ್ಷ್ಣೋ ದ್ಯೌಃ ಸಮವರ್ತತ । ಪದ್ಭ್ಯಾಂ ಭೂಮಿರ್ದಿಶಃ ಶ್ರೋತ್ರಾತ್ । ತಥಾ ಲೋಕಾಗ್‍ಂ ಅಕಲ್ಪಯನ್ ॥೧೫॥

(ಶ್ರೀ) ಆರ್ದ್ರಾಂ ಯಃ ಕರಿಣೀಂ ಯಷ್ಟಿಂ ಪಿಂಗಲಾಂ ಪದ್ಮಮಾಲಿನೀಮ್ । ಚಂದ್ರಾಂ ಹಿರಣ್ಮಯೀಂ ಲಕ್ಷ್ಮೀಂ ಜಾತವೇದೋ ಮ ಆವಹ ॥೧೪॥

ಮನುನಾಮಕ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಸತ್ಯನಾರಾಯಣಾಯ ಸ್ವಾಮಿನೇ ನಮಃ । ತಾಂಬೂಲಂ ಸಮರ್ಪಯಾಮಿ ॥ ಸುವರ್ಣಪುಷ್ಪದಕ್ಷಿಣಾಂ ಸಮರ್ಪಯಾಮಿ ॥

ಅನಂತರ ವಾಯನದಾನ ಕೊಡಲು ಒಂದು ತಟ್ಟೆಯಲ್ಲಿ ತಾಂಬೂಲ-ದಕ್ಷಿಣೆ ಒಂದು ಫಲ ಇಟ್ಟು ಆ ತಟ್ಟೆಯನ್ನು ದೇವರ ಮುಂದಿಟ್ಟು ಈ ಶ್ಲೋಕ ಹೇಳಿ ಕೈ ಮುಗಿಯಬೇಕು.

ಇದಂ ಫಲಂ ಮಯಾ ದೇವ ಸ್ಥಾಪಿತಂ ಪುರತಸ್ತವ । ತೇನ ಮೇ ಸಫಲಾವಾಪ್ತಿರ್ ಭವೇಜ್ಜನ್ಮನಿ ಜನ್ಮನಿ ॥

(ಪೂಜೆಯೆಲ್ಲ ಮುಗಿದ ನಂತರ ಇದನ್ನು ಬ್ರಾಹ್ಮಣರಿಗೆ ಕೊಡಬೇಕು)

ಮಂಗಳನೀರಾಜನಮ್ (ಮಹಾಮಂಗಳಾರತಿ)–ಹರಿಃ ಓಂ ॥ ಜಯತ್ಯಜೋಽಖಂಡ ಗುಣೋರುಮಂಡಲಃ ಸದೋದಿತೋ ಜ್ಞಾನಮರೀಚಿಮಾಲೀ । ಸ್ವಭಕ್ತಹಾರ್ದೋಚ್ಚತಮೋ ನಿಹಂತಾ ವ್ಯಾಸಾವತಾರೋ ಹರಿರಾತ್ಮಭಾಸ್ಕರಃ ॥ ಇತ್ಯಾದಿ

ಶಂಖಭ್ರಮಣಮ್ (ಶಂಖಕ್ಕೆ ಸ್ವಲ್ಪ ನೀರು ಹಾಕಿಕೊಂಡು ಅದನ್ನು ದೇವರ ಮುಂದೆ ಮೂರು ಸರಿ, ಕಾಲಿನಿಂದ ಕಿರೀಟದವರೆಗೆ, ನಾಭಿಯಿಂದ ಕಿರೀಟದವರೆಗೆ, ಹಾಗೂ ಹೃದಯದಿಂದ ಕಿರೀಟದವರೆಗೆ ಸುತ್ತಿಸಿ ಪಂಚಪಾತ್ರೆಗೆ ಹಾಕಬೇಕು. ಇದು ಶಂಖತೀರ್ಥ - ಪ್ರೋಕ್ಷಿಸಿಕೊಳ್ಳುವುದಕ್ಕೆ)

ದುಷ್ಟಯಕ್ಷರಕ್ಷಃ ಪಿಶಾಚಾದಿ ದೃಷ್ಟಿದೋಷಪರಿಹಾರಾರ್ಥಂ ಛಾಯಾದೋಷ-ಪರಿಹಾರಾರ್ಥಂ ದುಷ್ಟಶರೀರೇಂದ್ರಿಯ ಸ್ಪರ್ಶದೋಷನಿವೃತ್ತ್ಯರ್ಥಂ ಚ ಶಂಖಭ್ರಮಣಂ ಕರಿಷ್ಯೇ ॥ ಪಾದಾದಿ ಮುಕುಟಪರ್ಯಂತಂ, ನಾಭ್ಯಾದಿ ಮುಕುಟಪರ್ಯಂತಂ, ಹೃದಯಾದಿ ಮುಕುಟಪರ್ಯಂತಂ ತ್ರಿಃ ಭ್ರಾಮಯೇತ್ ॥

ತವ ಭ್ರಮಾಸ ಇತ್ಯಸ್ಯ ವಾಮದೇವೋ ಗೌತಮಸ್ತ್ರಿಷ್ಟುಪ್ ರಕ್ಷೋಹಾಗ್ನಿಃ ।

ತವ ಭ್ರಮಾಸ ಆಶುಯಾ ಪತಂ-ತ್ಯನುಸ್ಪೃಶ ಧೃಷತಾ ಶೋಶುಚಾನಃ । ತಪೂಂಷ್ಯಗ್ನೇ ಜುಹ್ವಾಪತಂಗಾ - ನಸಂದಿತೋ ವಿ ಸೃಜ ವಿಷ್ವಗುಲ್ಕಾಃ ॥

೧೫ ಮಂತ್ರಪುಷ್ಪಮ್ (ಹೂವು-ಮಂತ್ರಾಕ್ಷತೆ-ಎಲ್ಲರಿಗೂ ಕೊಟ್ಟು)

ಓಂ ॥ ವೇದಾಹಮೇತಂ ಪುರುಷಂ ಮಹಾಂತಮ್ । ಆದಿತ್ಯವರ್ಣಂ ತಮಸಸ್ತು ಪಾರೇ॥ ಸರ್ವಾಣಿ ರೂಪಾಣಿ ವಿಚಿತ್ಯ ಧೀರಃ । ನಾಮಾನಿ ಕೃತ್ವಾಽಭಿವದನ್ ಯದಾಸ್ತೇ ॥ ಇತ್ಯಾದಿ

ಓಂ ॥ ರಾಜಾಧಿರಾಜಾಯ ಪ್ರಸಹ್ಯ ಸಾಹಿನೇ । ನಮೋ ವಯಂ ವೈಶ್ರವಣಾಯ ಕುರ್ಮಹೇ । ಸ ಮೇ ಕಾಮಾನ್ ಕಾಮಕಾಮಾಯ ಮಹ್ಯಮ್ । ಕಾಮೇಶ್ವರೋ ವೈಶ್ರವಣೋ ದಧಾತು । ಕುಬೇರಾಯ ವೈಶ್ರವಣಾಯ । ಮಹಾರಾಜಾಯ ನಮಃ ॥ ಇತ್ಯಾದಿ ॥

ದೇವರ ಮೇಲೆ ಹೂವು-ಮಂತ್ರಾಕ್ಷತೆ ಏರಿಸಿ ಪ್ರದಕ್ಷಿಣೆ ನಮಸ್ಕಾರ ಮಾಡಿ

ಮಂತ್ರಪುಷ್ಪಂ ಸಮರ್ಪಯಾಮಿ । ಛತ್ರಂ, ಚಾಮರಂ, ದರ್ಪಣಂ, ಗೀತಂ, ನೃತ್ಯಂ, ಆಂದೋಳಿಕಾಂ, ಅಶ್ವಾರೋಹಣ - ಗಜಾರೋಹಣಾದಿ ಸಮಸ್ತ ರಾಜೋಪಚಾರ - ದೇವೋಪಚಾರ ಪೂಜಾಃ ಸಮರ್ಪಯಾಮಿ ॥ 'ಪ್ರದಕ್ಷಿಣನಮಸ್ಕಾರಾನ್ ಸಮರ್ಪಯಾಮಿ ॥'ಯಾನಿ ಕಾನಿ ಚ ಪಾಪಾನಿ .. ' ಇತ್ಯಾದಿ

೧೬. ಪ್ರಾರ್ಥನಾ - ಅಪರಾಧ ಸಹಸ್ರಾಣಿ ಕ್ರಿಯಂತೇಽಹರ್ನಿಶಂ ಮಯಾ । ತಾನಿ ಸರ್ವಾಣಿ ಮೇ ದೇವ ಕ್ಷಮಸ್ವ ಪುರುಷೋತ್ತಮ ॥ ಆವಾಹನಂ ನ ಜಾನಾಮಿ ನ ಜಾನಾಮಿ ವಿಸರ್ಜನಮ್ । ಪೂಜಾಂ ಚೈವ ನ ಜಾನಾಮಿ ಕ್ಷಮ್ಯತಾಂ ಪುರುಷೋತ್ತಮ ॥ ನಾಹಂ ಕರ್ತಾ ಹರಿಃ ಕರ್ತಾ ತತ್ಪೂಜಾ ಕರ್ಮ-ಚಾಖಿಲಮ್ । ತಥಾಪಿ ಮತ್ಕೃತಾ ಪೂಜಾ ತ್ವತ್ಪ್ರಸಾದೇನ ನಾನ್ಯಥಾ ॥ ಆರಾಧ್ಯಸೇ ಪ್ರಾಣಭೃತಾಂ ಪ್ರಣೇತ್ರಾ ಪ್ರಾಣಾಧಿನಾಥೇನ ಸಮೀರಣೇನ । ನಾರಾಯಣ ಜ್ಞಾನಸುಖೈಕಪೂರ್ಣ-ಸ್ವಾಮಿನ್ ಮಮ ಶ್ರೀರಮಣ ಪ್ರಸೀದ ॥

(ಪು) ಓಂ ॥ ಯಜ್ಞೇನ ಯಜ್ಞಮಯಜಂತ ದೇವಾಃ । ತಾನಿ ಧರ್ಮಾಣಿ ಪ್ರಥಮಾನ್ಯಾಸನ್॥ ತೇ ಹ ನಾಕಂ ಮಹಿಮಾನಃ ಸಚಂತ । ಯತ್ರ ಪೂರ್ವೇ ಸಾಧ್ಯಾಃ ಸಂತಿ ದೇವಾಃ ॥೧೮॥

(ಶ್ರೀ) ಓಂ ॥ ತಾಂ ಮ ಆವಹ ಜಾತವೇದೋ ಲಕ್ಷ್ಮೀಮನಪಗಾಮಿನೀಮ್ ॥ ಯಸ್ಯಾಂ ಹಿರಣ್ಯಂ ಪ್ರಭೂತಂ ಗಾವೋ ದಾಸ್ಯೋಽಶ್ವಾನ್ ವಿಂದೇಯಂ ಪುರುಷಾನಹಮ್ ॥೧೫॥

ವಿದ್ಯಾಬುದ್ಧಿಧನೈಶ್ವರ್ಯ - ಪುತ್ರಪೌತ್ರಾದಿ ಸಂಪದಃ । ಪುಷ್ಪಾಂಜಲಿ ಪ್ರದಾನೇನ ದೇಹಿ ಮೇ ಈಪ್ಸಿತಂ ವರಮ್ ॥

ಅರ್ಘ್ಯಪ್ರದಾನಮ್ - (ಹಾಲು-ನೀರು ಸಹಿತ) ಕಾವೇರೀತೀರಜಂ ತೋಯಂ ಕಪಿಲಾ ವಾರಿಮಿಶ್ರಿತಮ್ । ಮಯಾ ನಿವೇದಿತೋ ಭಕ್ತ್ಯಾ ಅರ್ಘ್ಯೋಽಯಂ ಪ್ರತಿಗೃಹ್ಯತಾಮ್॥

ಪೂಜಾಪರಿಸಮಾಪ್ತಿಃ - ಯಸ್ಯ ಸ್ಮೃತ್ಯಾಚ ನಾಮೋಕ್ತ್ಯಾತಪಃ ಪೂಜಾ ಕ್ರಿಯಾದಿಷು । ನ್ಯೂನಂ ಸಂಪೂರ್ಣತಾಂ ಯಾತಿ ಸದ್ಯೋ ವಂದೇ ತಮಚ್ಯುತಮ್ ॥ ಮಂತ್ರಹೀನಂ ಕ್ರಿಯಾಹೀನಂ ಭಕ್ತಿಹೀನಂ ರಮಾಪತೇ । ಯತ್ ಕೃತಂ ತು ಮಯಾ ದೇವ ಪರಿಪೂರ್ಣಂ ತದಸ್ತು ಮೇ ॥

ಅನೇನ ಯಥಾಶಕ್ತಿ ಶ್ರೀ ಮನುನಾಮಕ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಮಹಾಲಕ್ಷ್ಮೀಸಮೇತ ಶ್ರೀಸತ್ಯನಾರಾಯಣಸ್ವಾಮಿನಃ ಯಥಾಜ್ಞಪ್ತಿ ಯಥಾವೈಭವಂ ಧ್ಯಾನಾವಾಹನಾದಿ ಷೋಡಶೋಪಚಾರ ಪೂಜಾವಿಧಿನಾ ಭಗವಾನ್ ಅನಂತ ಕಲ್ಯಾಣ ಗುಣಪರಿಪೂರ್ಣಃ ಶ್ರೀಮದ್ಹನುಮದ್ಭೀಮ ಮಧ್ವಾಂತರ್ಗತ ಶ್ರೀರಾಮಕೃಷ್ಣವೇದ-ವ್ಯಾಸಾತ್ಮಕ ಶ್ರೀಮನ್ನಾರಾಯಣಃ ಪ್ರೀಯತಾಂ, ಸುಪ್ರೀತೋ ವರದೋ ಭವತು ॥ ಶ್ರೀಕೃಷ್ಣಾರ್ಪಣಮಸ್ತು ॥

ಲೋಪದೋಷ ಪ್ರಾಯಶ್ಚಿತ್ತಾರ್ಥಮ್ - ಮಧ್ಯೇ ಮಂತ್ರ ತಂತ್ರ ಸ್ವರವರ್ಣ ಪದವೃತ್ತಲೋಪದೋಷಪ್ರಾಯಶ್ಚಿತ್ತಾರ್ಥಂ ಯಥಾಶಕ್ತಿ ನಾಮತ್ರಯ ಮಂತ್ರಜಪಂ ಕರಿಷ್ಯೇ ॥ ಓಂ ಅಚ್ಯುತಾಯ ನಮಃ । ಓಂ ಅನಂತಾಯ ನಮಃ । ಓಂ ಗೋವಿಂದಾಯ ನಮಃ ॥ ಓಂ ಅಚ್ಯುತಾನಂತ ಗೋವಿಂದೇಭ್ಯೋ ನಮಃ ॥

ಉಪಾಯನದಾನಮ್ - ಆಚಮ್ಯ । ಪ್ರಾಣಾನಾಯಮ್ಯ । ದೇಶಕಾಲೌ ಸಂಕೀರ್ತ್ಯ । ಪೂರ್ವೋಚ್ಚರಿತ ಏವಂ ಗುಣವಿಶೇಷಣ ವಿಶಿಷ್ಟಾಯಾಂ ಶುಭತಿಥೌ ಮನುನಾಮಕ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀ ಸತ್ಯನಾರಾಯಣ ಪ್ರೇರಣಯಾ ಮನುನಾಮಕ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀ ಸತ್ಯನಾರಾಯಣ ದೇವತಾಪ್ರೀತ್ಯರ್ಥಂ ಮದನುಷ್ಠಿತ ಸತ್ಯನಾರಾಯಣ ವ್ರತಪೂರ್ಣತಾ ಸಾಂಗತಾ ಸಿದ್ಧ್ಯರ್ಥಂ ಶ್ರೋತ್ರಿಯ ಬ್ರಾಹ್ಮಣಾಯ ಉಪಾಯನದಾನಮಹಂ ಕರಿಷ್ಯೇ ॥

(ಮಂತ್ರಾಕ್ಷತೆ ನೀರು ಬಿಡಬೇಕು. ಬ್ರಾಹ್ಮಣರ ಮೇಲೆ ಎರಡು ಕಾಳು ಮಂತ್ರಾಕ್ಷತೆ ಏರಿಸಿ ಗಂಧ ಹೂವು ಕೊಟ್ಟು ಮುಂದಿನ ಮಂತ್ರ ಹೇಳಿ ದೇವರ ಮುಂದಿಟ್ಟಿದ್ದ ಉಪಾಯನ ವನ್ನು ಕೊಟ್ಟು ನಮಸ್ಕರಿಸಿ, ಅವರಿಂದ ಮಂತ್ರಾಕ್ಷತೆ ಸ್ವೀಕರಿಸಬೇಕು)

ನಾರಾಯಣಃ ಪ್ರತಿಗೃಹ್ಣಾತಿ ನಾರಾಯಣೋ ವೈ ದಧಾತಿ ಚ । ನಾರಾಯಣಸ್ತಾರಕೋ ದ್ವಾಭ್ಯಾಂ ಹೇ(ಭೋ) ನಾರಾಯಣ ನಮೋಸ್ತು ತೇ ॥

ಇತಿ ಶ್ರೀಮಾಧ್ವಸಂಪ್ರದಾಯರೀತ್ಯಾ ಶ್ರೀಸತ್ಯನಾರಾಯಣ ಪೂಜಾವಿಧಿಃ ಸಮಾಪ್ತಃ

ಅಥ ಉತ್ತರಪೂಜಾ (ವಿಸರ್ಜನ ಕ್ರಮಃ) ಆಚಮ್ಯ । ಪ್ರಾಣಾನಾಯಮ್ಯ । ದೇಶಕಾಲೌ ಸಂಕೀರ್ತ್ಯ । ಏವಂಗುಣವಿಶೇಷಣ ವಿಶಿಷ್ಟಾಯಾಂ ಶುಭತಿಥೌ ಮನುನಾಮಕ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಸತ್ಯನಾರಾಯಣ ಪ್ರೇರಣಯಾ ಮನುನಾಮಕ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಸತ್ಯನಾರಾಯಣ ಪ್ರೀತ್ಯರ್ಥಂ ಉತ್ತರಪೂಜಾಪೂರ್ವಕ ಸತ್ಯನಾರಾಯಣ ದೇವತಾ ವಿಸರ್ಜನಂ ಕರಿಷ್ಯೇ ॥

ಮನುನಾಮಕ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಸತ್ಯನಾರಾಯಣ ಸ್ವಾಮಿನೇ ನಮಃ । ಅಲಂಕಾರಾರ್ಥೇ ಅಕ್ಷತಾನ್ ಸಮರ್ಪಯಾಮಿ । ವಿಲೇಪನಾರ್ಥೇ ಚಂದನಂ (ಗಂಧಂ) ಸಮರ್ಪಯಾಮಿ । ಪೂಜಾರ್ಥೇ ತುಲಸೀದಲಾನಿ ಪುಷ್ಪಾಣಿ ಚ ಸಮರ್ಪಯಾಮಿ ॥ ಓಂ ಶ್ರೀ ಕೇಶವಾಯ ನಮಃ । ಓಂ ಶ್ರೀ ನಾರಾಯಣಾಯ ನಮಃ । ... ಓಂ ಶ್ರೀ ಕೃಷ್ಣಾಯ ನಮಃ । ಧೂಪಮಾಘ್ರಾಪಯಾಮಿ । ದೀಪಂ ದರ್ಶಯಾಮಿ । ಯತ್ಕಿಂಚಿತ್ ನೈವೇದ್ಯಂ ಸಮರ್ಪಯಾಮಿ । ಉತ್ತರ ಮಹಾನೀರಾಜನಂ ದರ್ಶಯಾಮಿ। ಮಂತ್ರಪುಷ್ಪಂ ಸಮರ್ಪಯಾಮಿ । "ಯಜ್ಞೇನ ಯಜ್ಞಮಯಜಂತ ದೇವಾಃ - ಸಂತಿ ದೇವಾಃ ॥" ಪ್ರಾರ್ಥನಾಂ ಸಮರ್ಪಯಾಮಿ ॥ (ಕಲಶವನ್ನು ಅಲುಗಾಡಿಸಿ)

ಓಂ ॥ ಉತ್ತಿಷ್ಠ ಬ್ರಹ್ಮಣಸ್ಪತೇ ದೇವಯಂತಸ್ತ್ವೇ ಮಹೇ । ಉಪ ಪ್ರಯಂತು ಮರುತಃ ಸುದಾನವ ಇಂದ್ರ ಪ್ರಾಶೂರ್ಭವಾ ಸಚಾ ॥

ಯಾಂತು ದೇವಗಣಾಃ ಸರ್ವೇ ಪೂಜಾಮಾದಾಯ ಪಾರ್ಥಿವೀಮ್ ।
ಇಷ್ಟಕಾಮ್ಯಾರ್ಥಸಿದ್ಧ್ಯರ್ಥಂ ಪುನರಾಗಮನಾಯ ಚ ॥

ಕಥೆ ಕೇಳಿದ ನಂತರ ಪುಸ್ತಕಕ್ಕೂ ಪೂಜೆ ಮಾಡಿ ಮಂಗಳಾರತಿ ಮಾಡಬೇಕು. ನಂತರ ತೀರ್ಥ ಪ್ರಸಾದ ಸ್ವೀಕರಿಸಬೇಕು.

★★★

ಶ್ರೀಸತ್ಯನಾರಾಯಣ ವ್ರತ ಕಥೆಯ ಸರಳಾನುವಾದ

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಮ್ ।
ಪ್ರಸನ್ನವದನಂ ಧ್ಯಾಯೇತ್ ಸರ್ವವಿಘ್ನೋಪಶಾಂತಯೇ ॥ ೧ ॥

ಲಕ್ಷ್ಮೀನಾರಾಯಣಂ ವಂದೇ ತದ್ಭಕ್ತಪ್ರವರೋ ಹಿ ಯಃ ।
ಶ್ರೀಮದಾನಂತೀರ್ಥಾಖ್ಯೋ ಗುರುಸ್ತಂ ಚ ನಮಾಮ್ಯಹಮ್ ॥ ೨ ॥

ಹಯಗ್ರೀವ ಹಯಗ್ರೀವ ಹಯಗ್ರೀವೇತಿ ಯೋ ವದೇತ್ ।
ತಸ್ಯ ನಿಸ್ಸರತೇ ವಾಣೀ ಜಹ್ನುಕನ್ಯಾಪ್ರವಾಹವತ್ ॥ ೩ ॥

ಸ್ವಸ್ತ್ಯಸ್ತು ಸತಾಮ್ । (ಸಜ್ಜನರಿಗೆ ಒಳ್ಳೆಯದಾಗಲಿ) ಸಮಸ್ತಸನ್ಮಂಗಳಾನಿ ಭವಂತು ॥ ಯತ್ಕಥಾ ಶ್ರವಣ ಪಠನ ಮಾತ್ರೇಣ ವಕ್ತುಶ್ಚ ಶ್ರೋತೃಣಾಂ ಚ ನಿಖಿಲ-ಕಲಿಕೃತ-ಕಲ್ಮಷಾಪನೋದನಪಟುತರೇ ಶ್ರೀಮತ್ ಸ್ಕಾಂದೇ ಪುರಾಣೇ ರೇವಾಖಂಡೇ ಶ್ರೀಮತ್ ಸತ್ಯನಾರಾಯಣವ್ರತಕಥಾ ಪ್ರಾರಂಭಃ ॥

ಶ್ರೀಗುರುಭ್ಯೋ ನಮಃ ॥ ಹರಿಃ ಓಮ್ ॥

ಏಕದಾ ನೈಮಿಷಾರಣ್ಯೇ ಋಷಯಃ ಶೌನಕಾದಯಃ ।
ಪಪ್ರಚ್ಛುರ್ ಮುನಯಃ ಸರ್ವೇ ಸೂತಂ ಪೌರಾಣಿಕಂ ಖಲು ॥

೧. ಶೌನಕಾದಿಗಳ ಪ್ರಶ್ನೆ – ಒಂದಾನೊಂದು ಕಾಲದಲ್ಲಿ ನೈಮಿಷಾರಣ್ಯವಾಸಿಗಳಾದ ಶೌನಕಾದಿ ಮಹರ್ಷಿಗಳು ಸೂತಪುರಾಣಿಕರನ್ನು ಹೀಗೆ ಪ್ರಶ್ನೆ ಮಾಡಿದರು– ಹೇ ಸೂತರೇ, ಮಹಾತ್ಮರೇ, ನೀವು ನಮಗೆ ಅನೇಕ ಆಖ್ಯಾನಗಳನ್ನೂ ವ್ರತಕಥೆಗಳನ್ನೂ ಹೇಳಿದ್ದೀರಿ. ಕಲಿಯುಗದಲ್ಲಿ ಬಹಳ ಸುಲಭವಾಗಿ ಸಕಲೇಷ್ಟಾರ್ಥಗಳನ್ನೂ ನೆರವೇರಿಸಿಕೊಡುವಂಥಾ ಯಾವುದಾದರೂ ಸುಲಭೋಪಾಯವಿದ್ದರೆ ಆ ವ್ರತವನ್ನು ನಮಗೆ ಹೇಳಿರಿ – ಎಂದು ಕೇಳಿದರು.

೨. ಸೂತಪುರಾಣಿಕರ ಉತ್ತರ – ಶೌನಕಾದಿಗಳೇ, ಬಹಳ ಸಂತೋಷ. ನೀವು ಸಜ್ಜನೋದ್ಧಾರಕ್ಕಾಗಿ, ಈ ವಿಚಾರ ಕೇಳುತ್ತಿದ್ದೀರಿ. ಹಿಂದೆ, ಇದೇ ರೀತಿಯೇ ನಾರದ ಮಹರ್ಷಿಗಳು ಭೂಮಿಯಲ್ಲಿ ಸಂಚಾರ ಮಾಡುತ್ತಾ ಇದ್ದಾಗ ಅನೇಕ ಜನಗಳು ಅನೇಕ ವಿಧವಾಗಿ ಕಷ್ಟ, ನಷ್ಟಗಳನ್ನು ಅನುಭವಿಸುತ್ತಾ ದುಃಖಪೂರ್ಣರಾಗಿದ್ದುದನ್ನು ನೋಡಿ ಅವರಿಗೆ ಮನಸ್ಸು ಕರಗಿಹೋಯಿತು. ಈ ಕಷ್ಟನಿವಾರಣೆಗೆ ಸುಲಭೋಪಾಯ ಯಾವುದೆಂದು ಭಗವಂತ ವಿಷ್ಣುವನ್ನೇ ಕೇಳಿ ಬಿಡುವೆನು ಎಂದು ನಿಶ್ಚಯಿಸಿಕೊಂಡು ವೈಕುಂಠಲೋಕಕ್ಕೆ ಹೋಗಿ ವಿಷ್ಣುವನ್ನು ಹೀಗೆ ಪ್ರಾರ್ಥಿಸಿದರು -

ನಮೋ ವಾಙ್ಮನಸಾತೀತ ನಾರಾಯಣ ನಮೋಸ್ತು ತೇ ।
ಆದಿಮಧ್ಯಾಂತದೂರಾಯ ನಿರ್ಗುಣಾಯ ಗುಣಾತ್ಮನೇ ॥

ಆಗ ವಿಷ್ಣುವು ಪ್ರತ್ಯಕ್ಷನಾಗಿ 'ಹೇ ನಾರದ, ನೀನು ಬರಲು ಕಾರಣವೇನು? ಏನಾಗಬೇಕು?' ಎಂದು ಕೇಳಿದನು. ಆಗ ನಾರದರು ಭೂಲೋಕದಲ್ಲಿ ತಾವು ಕಂಡ ದುಃಖವನ್ನೆಲ್ಲಾ ವಿವರಿಸಿ, 'ಹೇ ಸ್ವಾಮಿ, ಈ ಸಕಲ ದುಃಖನಿವಾರಣೆಗೆ ಯಾವುದಾದರೂ ಸುಲಭೋಪಾಯವನ್ನು ಹೇಳು. ಅದರಿಂದ ಜನರು ಕೃತಾರ್ಥರಾಗಲಿ' ಎಂದರು. ಅದಕ್ಕೆ ನಾರಾಯಣನು ಹೀಗೆ ಹೇಳಿದನು –

೩. ಸತ್ಯನಾರಾಯಣ ಪೂಜಾ ವಿಧಾನ – ಹೇ ನಾರದ, ಲೋಕ ಹಿತಕ್ಕಾಗಿ ಈ ವಿಚಾರ ಹೇಳುತ್ತಿದ್ದೇನೆ, ಕೇಳು. ನಾನು ಸತ್ಯನಾರಾಯಣ ಎಂಬ ಹೆಸರಿನಿಂದ ಅತಿ ಸುಲಭವಾಗಿ ಸಕಲೇಷ್ಟಾರ್ಥಗಳನ್ನೂ ಸಲ್ಲಿಸುತ್ತೇನೆ. ನನ್ನ ಪೂಜೆಯೂ ಬಹಳ ಸುಲಭ. ಯಾರಿಗೆ ಯಾವಾಗ ಭಕ್ತಿಯುಂಟಾಗುವುದೋ ಆಗ ಅವರು ಯಾರೇ ಆಗಲಿ, ಯಾವ ದಿನವೇ ಆಗಲಿ, ಎಲ್ಲಿ ಬೇಕಾದರೂ ನನ್ನನ್ನು ಪೂಜಿಸಬಹುದು.

ಯಸ್ಮಿನ್ ಕಸ್ಮಿನ್ ದಿನೇ ಮರ್ತ್ಯೋ ಭಕ್ತಿಶ್ರದ್ಧಾಸಮನ್ವಿತಃ ।
ದೇವಾಲಯೇ ನದೀತೀರೇ ವೃಕ್ಷಮೂಲೇಽಥ ಸ್ವಗೃಹೇ ॥

ಹಗಲಾಗಲಿ, ರಾತ್ರಿಯಾಗಲಿ, ದೇವಾಲಯದಲ್ಲಾಗಲಿ, ನದೀ ದಡದಲ್ಲಾಗಲಿ, ಮರದ ಕೆಳಗಾಗಲಿ ಅಥವಾ ತನ್ನ ಮನೆಯಲ್ಲೇ ಆಗಲಿ, ಎಲ್ಲಿ ಬೇಕಾದರೂ ನನ್ನ ಪೂಜೆ ಮಾಡಬಹುದು. ಆದರೆ ನೈವೇದ್ಯಕ್ಕೆ 'ಸಪಾದ' ಎಂಬ ಪದಾರ್ಥ ಮಾಡಬೇಕು.

ರಂಭಾಫಲಂ ಘೃತಂ ಕ್ಷೀರಂ ಗೋಧೂಮಸ್ಯ ಚ ಚೂರ್ಣಕಮ್ ।
ಅಭಾವೇ ಶಾಲಿಚೂರ್ಣಂ ವಾ ಶರ್ಕರಾಸಹಿತಂ ತಥಾ ॥

ಬಾಳೆಹಣ್ಣು, ತುಪ್ಪ, ಹಾಲು, ಗೋಧಿಹಿಟ್ಟು (ಅದಿಲ್ಲದಿದ್ದರೆ ಅಕ್ಕಿಹಿಟ್ಟು) ಮತ್ತು ಸಕ್ಕರೆ ಈ ಪದಾರ್ಥಗಳನ್ನು ಸಮ ಸಮವಾಗಿ ಹಾಕಿ ಬೇಯಿಸಿ, ಅದನ್ನೇ – ಸಪಾದವನ್ನೇ – ನೈವೇದ್ಯಕ್ಕೆ ಇಡಬೇಕು. ಹೀಗೆ ಬಂಧು-ಬಾಂಧವರಿಂದ ಕೂಡಿ ನಾಲ್ಕು ವರ್ಷ ಪೂಜೆ ಮಾಡಿ ಕೊನೆಗೆ ಉದ್ಯಾಪನೆ ಮಾಡಬೇಕು. ಅದರಿಂದ ಅವನಿಗೆ ಸಕಲೇಷ್ಟಾರ್ಥಗಳೂ ಸಿದ್ಧಿಸುವುವು.

ಏವಂ ಕೃತೇ ಮನುಷ್ಯಾಣಾಂ ವಾಂಛಾಸಿದ್ಧಿರ್ ಭವೇದ್ ಧ್ರುವಮ್ ।
ವಿಶೇಷತಃ ಕಲಿಯುಗೇ ಲಘೂಪಾಯೋಽಸ್ತಿ ಭೂತಲೇ ॥

ಹೀಗೆ ಮಾಡಿದರೆ ಮನುಷ್ಯರಿಗೆ ಸಕಲೇಷ್ಟಾರ್ಥಗಳೂ ತಪ್ಪದೇ ಸಿದ್ಧಿಸುವುವು. ಇದು ಕಲಿಯುಗದಲ್ಲಿ ವಿಶೇಷವಾಗಿ ಬಹಳ ಸುಲಭವಾದ ಪೂಜಾವಿಧಾನವಾಗಿದೆ, ಎಂಬಲ್ಲಿಗೆ ಸತ್ಯನಾರಾಯಣ ವ್ರತ ಕಥೆಯಲ್ಲಿ ಪ್ರಥಮಾಧ್ಯಾಯ ಸಮಾಪ್ತವಾಯಿತು.

ದ್ವಿತೀಯಾಧ್ಯಾಯ

೪. ನಾರದರ ಪ್ರಶ್ನೆ – ಅದನ್ನು ಕೇಳಿದ ನಾರದರು ಭಗವಂತನನ್ನು ಪುನಃ ಪ್ರಶ್ನೆ ಮಾಡಿದರು. 'ಒಳ್ಳೆಯದು, ಸ್ವಾಮಿ. ಈ ವ್ರತವನ್ನು ಹಿಂದೆ ಯಾರಾದರೂ ಮಾಡಿದ್ದರಾ? ಅದರಿಂದ ಅವರಿಗೆ ಏನು ಫಲ ಲಭಿಸಿತು? ಎಂಬುದನ್ನು ನನಗೆ ತಿಳಿಸು' ಎಂದರು. ಅದಕ್ಕೆ ನಾರದರಿಗೆ ನಾರಾಯಣನು ಹೀಗೆ ಹೇಳಿದನೆಂದು ಶೌನಕಾದಿ ಮುನಿಗಳಿಗೆ ಸೂತ ಪುರಾಣಿಕರು ಹೇಳುತ್ತಾರೆ.

೫. ಕಾಶಿಯ ದರಿದ್ರ ಬ್ರಾಹ್ಮಣನ ಕಥೆ –

ಕಶ್ಚಿತ್ ಕಾಶೀಪುರೇ ರಮ್ಯೇ ಹ್ಯಾಸೀತ್ ವಿಪ್ರೋಽತಿ ನಿರ್ಧನಃ ।

ಹಿಂದೆ ಕಾಶೀಪಟ್ಟಣದಲ್ಲಿ ದಟ್ಟ ದರಿದ್ರನಾದ ಒಬ್ಬ ಬ್ರಾಹ್ಮಣನಿದ್ದನು. ಅವನ ಸಂಸಾರ ದೊಡ್ಡದಾಗಿತ್ತು. ಆದರೆ ದಿನವೆಲ್ಲ ಅಡ್ಡಾಡಿದರೂ ಹೊಟ್ಟೆ ತುಂಬ ಭಿಕ್ಷೆ ಸಿಗುತ್ತಿರಲಿಲ್ಲ. ಒಂದು ದಿನ ಬಹಳ ಬೇಸತ್ತು ಗೋಳಾಡುತ್ತಿದ್ದುದನ್ನು ಕಂಡು ಭಗವಂತನೇ ವೃದ್ಧ ಬ್ರಾಹ್ಮಣ ವೇಷದಿಂದ ಅವನಿಗೆ ಸತ್ಯನಾರಾಯಣ ವ್ರತವನ್ನು ಮಾಡುವಂತೆ ಬೋಧಿಸಿದನು. ಆ ದರಿದ್ರ ಬ್ರಾಹ್ಮಣನಿಗೆ ಈ ಮಾತು ಕೇಳಿ ರಾತ್ರಿಯೆಲ್ಲ ನಿದ್ದೆ ಬರಲಿಲ್ಲ. ಬೆಳಿಗ್ಗೆ ಎದ್ದು, 'ಸತ್ಯನಾರಾಯಣ ವ್ರತವನ್ನು ಮಾಡುತ್ತೇನೆ' ಎಂದು ಸಂಕಲ್ಪ ಮಾಡಿಕೊಂಡು ಭಿಕ್ಷಕ್ಕೆ ಹೊರಟನು. ಆ ದಿನ ಅವನಿಗೆ ಸಾಕಷ್ಟು ಭಿಕ್ಷೆ ದೊರಕಿತು. ಅದರಿಂದ ಪೂಜಾ ಸಾಮಾನುಗಳನ್ನು ತಂದು ಬಂಧುಗಳೊಡನೆ ಕೂಡಿ ವ್ರತವನ್ನು ಆಚರಿಸಿದನು. ಹೀಗೆ ದಿನ ದಿನಕ್ಕೆ ಅವನ ದಾರಿದ್ರ್ಯವು ಕಳೆದು ಐಶ್ವರ್ಯ ಕೂಡುತ್ತಾ ಬಂದಿತು. ಸುಖವು ಹೆಚ್ಚುತ್ತಾ ಹೋಯಿತು.

ಸರ್ವ ದುಃಖವಿನಿರ್ಮುಕ್ತೋ ಸರ್ವ ಸಂಪತ್ ಸಮನ್ವಿತಃ ।
ಬಭೂವ ಸ ದ್ವಿಜಶ್ರೇಷ್ಠೋ ವ್ರತಸ್ಯಾಸ್ಯ ಪ್ರಭಾವತಃ ।

ಆ ಬ್ರಾಹ್ಮಣನು - ಈ ವ್ರತದ ಪ್ರಭಾವದಿಂದ ಸಕಲ ದುಃಖಗಳನ್ನೂ ದಾಟಿ ಸರ್ವ ಸಂಪತ್ತು ಸಮೃದ್ಧಿಯುಳ್ಳವನಾದನು.

೬. ಕಟ್ಟಿಗೆ ಮಾರುವವನ ಕಥೆ –

ಏತಸ್ಮಿನ್ನಂತರೇ ಕಾಲೇ ಕಾಷ್ಠಕ್ರೇತಾ ಸಮಾಗತಃ ।

ಹೀಗೆ ಆ ಬ್ರಾಹ್ಮಣನು ಸತ್ಯನಾರಾಯಣ ಪೂಜೆ ಮಾಡುತ್ತಿದ್ದಾಗ, ಒಬ್ಬ ಕಟ್ಟಿಗೆ ಮಾರುವವನು ಪೂಜೆ ಮಾಡುತ್ತಿದ್ದ ಸ್ಥಳಕ್ಕೆ ಬಂದನು. ಪೂಜೆಯನ್ನು ನೋಡಿ ಸಂತೋಷಗೊಂಡು ತಾನೂ ಪ್ರಸಾದವನ್ನು ಸ್ವೀಕರಿಸಿ, 'ಸ್ವಾಮಿ, ಈ ಪೂಜೆಯನ್ನು ನಾನು ಮಾಡಬಹುದೇ?' ಎಂದು ಕೇಳಲು ಬ್ರಾಹ್ಮಣನು 'ಅವಶ್ಯ ಮಾಡಬಹುದು' ಎಂದನು.

ಸತ್ಯನಾರಾಯಣೋ ವಿಷ್ಣುರ್ ವಾಂಛಿತಾರ್ಥ ಫಲಪ್ರದಃ ॥

ಭಗವಂತ ಸತ್ಯನಾರಾಯಣ ಎಲ್ಲರಿಗೂ ಅವರವರ ಇಷ್ಟಾರ್ಥವನ್ನು ನೆರವೇರಿಸುತ್ತಾನೆ ಎಂದು ಹೇಳಿ ಪೂಜಾ ವಿಧಾನವನ್ನೂ ಸಂಕ್ಷೇಪವಾಗಿ ಹೇಳಿದನು. ಆಗ ಕಟ್ಟಿಗೆಯವನು 'ಇವತ್ತು ಸಿಕ್ಕಿದ ಹಣದಲ್ಲೇ ಈ ವ್ರತ ಮಾಡುತ್ತೇನೆ' ಎಂದು ಸಂಕಲ್ಪ ಮಾಡಿಕೊಂಡು ಹೊರಟನು. ಆ ದಿನ ಅವನಿಗೆ ಹೆಚ್ಚು ದುಡ್ಡು ಲಭಿಸಿತು. ಆ ದುಡ್ಡಿನಿಂದ ಪೂಜಾ ಪದಾರ್ಥಗಳನ್ನು ತಂದು ವೈಭವದಿಂದ ಸತ್ಯನಾರಾಯಣ ವ್ರತವನ್ನು ಮಾಡಿದನು. ಅದರಿಂದ ಬರುಬರುತ್ತಾ ಅವನು ಒಳ್ಳೆಯ ಭಾಗ್ಯವಂತನಾದನು. ಅಲ್ಲದೆ

ಇಹಲೋಕೇ ಸುಖಂ ಭುಕ್ತ್ವಾ ಚಾಂತೇ ಸತ್ಯಪುರಂ ಯಯೌ ।

ಅವನು ಬದುಕಿರುವವರೆಗೂ ಸಕಲ ಭೋಗಗಳನ್ನೂ ಅನುಭವಿಸಿ ಸತ್ತಮೇಲೂ ಕೂಡ ಸತ್ಯನಾರಾಯಣನ ಲೋಕಕ್ಕೆ ಹೋದನು. ಎಂಬಲ್ಲಿಗೆ ಸತ್ಯನಾರಾಯಣ ಕಥೆಯಲ್ಲಿ ದ್ವಿತೀಯಾಧ್ಯಾಯವು ಸಮಾಪ್ತವಾಯಿತು.

ಮೂರನೇ ಅಧ್ಯಾಯ.

೭. ಉಲ್ಕಾಮುಖ ರಾಜನ ಕಥೆ.

ಪುರಾ ಚೋಲ್ಕಾಮುಖೋ ನಾಮ ನೃಪಶ್ಚಾಸೀತ್ ದಯಾನ್ವಿತಃ ।

ಪೂರ್ವಕಾಲದಲ್ಲಿ ಉಲ್ಕಾಮುಖನೆಂಬ ಒಬ್ಬ ದಯಾಮಯನೂ ಧರ್ಮಶೀಲನೂ ಆದ ರಾಜನಿದ್ದನು.

ಭಾರ್ಯಾ ತಸ್ಯ ಪ್ರಮುಗ್ಧಾ ಚ ಭದ್ರಶೀಲಾಽಭವತ್ ಸತೀ ।

ಅವನಿಗೆ ಪತಿಪರಾಯಣೆಯೂ, ಗುಣವಂತೆಯೂ ಆದ ಭದ್ರಶೀಲಾ ಎಂಬ ರಾಣಿಯು ಇದ್ದಳು. ಆದರೆ ಅವರಿಗೆ ಸಂತಾನವಿರಲಿಲ್ಲ . ಆದ್ದರಿಂದ ಅವರಿಬ್ಬರೂ ಮಕ್ಕಳಾಗುವುದಕ್ಕಾಗಿ ಒಂದು ನದೀತೀರದಲ್ಲಿ ಸತ್ಯನಾರಾಯಣ ಪೂಜೆಯನ್ನು ವೈಭವದಿಂದ ಮಾಡುತ್ತಿದ್ದರು.

೮. ವೈಶ್ಯ ಸಾಧುವಿನ ಆಗಮನ – ಅವರು ಪೂಜೆ ಮಾಡುತ್ತಿದ್ದಾಗ ವ್ಯಾಪಾರಕ್ಕಾಗಿ ಹಡಗಿನಲ್ಲಿ ಸಾಮಾನು ಹೇರಿಕೊಂಡು ಹೋಗುತ್ತಿದ್ದ ಒಬ್ಬ ವೈಶ್ಯಸಾಧು ಬಂದು ಪೂಜಾ ಸಂಭ್ರಮವನ್ನು ನೋಡಿ, ಪೂಜೆಯೆಲ್ಲಾ ಮುಗಿದಮೇಲೆ ಆ ದಂಪತಿಗಳನ್ನು 'ಈ ಪೂಜೆಯನ್ನು ಯಾವ ಉದ್ದೇಶದಿಂದ ಮಾಡುತ್ತಿದ್ದೀರಿ?' ಎಂದು ಕೇಳಿದನು. ಅದಕ್ಕೆ ಅವರು, ಸಂತಾನಾರ್ಥವಾಗಿ ಎಂದು ಹೇಳಿದರು. ಅದನ್ನು ಕೇಳಿ ಆ ವೈಶ್ಯ, 'ನನಗೂ ಮಕ್ಕಳಿಲ್ಲ; ಮಕ್ಕಳಾದರೆ ನಾನೂ ಈ ವ್ರತವನ್ನು ಮಾಡುವೆನು' ಎಂದು ಹರಸಿಕೊಂಡನು. ಮತ್ತು ಮನೆಗೆ ಹೋದಾಗ ತನ್ನ ಭಾರ್ಯೆಯಾದ ಲೀಲಾವತಿಗೂ ಈ ವಿಚಾರವನ್ನು ಹೇಳಿದನು. ಆಕೆಯು ಭಕ್ತಿಯಿಂದ 'ನಮಗೆ ಮಕ್ಕಳಾದರೆ ನಾವೂ ಈ ವ್ರತವನ್ನು ಮಾಡುತ್ತೇವೆ' ಎಂದು ಹರಸಿಕೊಂಡಳು.

೯. ಕನ್ಯಾಜನನ – ಆ ಲೀಲಾವತಿಯು ಭಕ್ತಿಭರದಿಂದ ಆಕೆ ಸ್ವಲ್ಪ ಕಾಲದಲ್ಲಿಯೇ ಗರ್ಭಧಾರಣೆ ಮಾಡಿ ಕಾಲಕ್ರಮದಲ್ಲಿ ಒಂದು ಹೆಣ್ಣು ಶಿಶುವನ್ನು ಪ್ರಸವಿಸಿದಳು. ಆ ಮಗುವಿಗೆ ತಂದೆ ತಾಯಿಗಳು 'ಕಲಾವತೀ' ಎಂದು ನಾಮಕರಣ ಮಾಡಿದರು. ನಾಮಕರಣ ಮಾಡಿದ ಮೇಲೆ ಲೀಲಾವತಿಯು ತನ್ನ ಗಂಡನಿಗೆ ಸತ್ಯನಾರಾಯಣ ವ್ರತವನ್ನು ಮಾಡಬೇಕೆಂದು ಎಚ್ಚರಿಸಿದಳು.

ತತೋ ಲೀಲಾವತೀ ಪ್ರಾಹ ಸ್ವಾಮಿನಂ ಮಧುರಂ ವಚಃ ।
ನ ಕರೋಷಿ ಕಿಮರ್ಥಂ ವಾ ಪುರಾ ಸಂಕಲ್ಪಿತಂ ವ್ರತಮ್ ॥

'ಹಿಂದೆ, ನೀವು ಮಕ್ಕಳಾದರೆ ಮಾಡುವುದಾಗಿ ಹರಸಿಕೊಂಡಿದ್ದ ವ್ರತವನ್ನು ಏಕೆ ಮಾಡುತ್ತಿಲ್ಲ?' ಎಂದು ನೆನಪು ಮಾಡಿದಳು. ವೈಶ್ಯಸಾಧು ಲೋಭದಿಂದಲೂ, ಉದಾಸೀನತೆಯಿಂದಲೂ ಅದಕ್ಕೆ ಒಪ್ಪದೆ,

ವಿವಾಹಸಮಯೇ ತಸ್ಯ ಕರಿಷ್ಯಾಮಿ ವ್ರತಂ ಪ್ರಿಯೇ ।

'ಇವಳ ವಿವಾಹ ಸಮಯದಲ್ಲಿ ಆ ವ್ರತವನ್ನು ಮಾಡುವೆ'ನೆಂದು ಆ ಮಾತನ್ನು

ತಳ್ಳಿಹಾಕಿದನು. ಅತ್ತಲಾಗಿ ಆ ಶಿಶು ದೊಡ್ಡದಾಗಿ ಬೆಳೆದು ವಿವಾಹವಯಸ್ಕಳಾದಳು. ಅದನ್ನು ಕಂಡು ತಂದೆಯು ಯೋಗ್ಯ ವರನನ್ನು ಹುಡುಕಿ ಅವಳ ವಿವಾಹವನ್ನೂ ಮಾಡಿದನು. ಆದರೂ ವೈಶ್ಯನಿಗೆ ಸತ್ಯನಾರಾಯಣ ವ್ರತವನ್ನು ಮಾಡಲು ಮನಸ್ಸು ಬರಲೇ ಇಲ್ಲ. ಹೀಗೆ ಅನೇಕ ವರ್ಷಗಳು ಕಳೆದರೂ ತನ್ನ ವ್ರತವನ್ನು ಮಾಡದೆ ಭ್ರಷ್ಟಪ್ರತಿಜ್ಞನಾದ ವೈಶ್ಯಸಾಧುವನ್ನು ಕಂಡು ಸತ್ಯನಾರಾಯಣ ಸ್ವಾಮಿಯು

ಭ್ರಷ್ಟಪ್ರತಿಜ್ಞಮಾಲೋಕ್ಯ ಶಾಪಂ ತಸ್ಮೈ ಪ್ರದತ್ತವಾನ್ ।

ಅವನಿಗೆ ಅನಿಷ್ಟವಾಗಲೆಂದು ಶಾಪವನ್ನು ಕೊಟ್ಟನು.

೧೦. ವೈಶ್ಯಸಾಧುವಿಗೆ ದುಃಖಪ್ರಾಪ್ತಿ – ವೈಶ್ಯ ಸಾಧುವು ಮಗು ಹುಟ್ಟಿ ಅನೇಕ ವರ್ಷಗಳಾದರೂ ಸತ್ಯವ್ರತವನ್ನು ಮಾಡದೆ ಅಸಡ್ಡೆ ಮಾಡಿದನು. ಅದರಿಂದ ಅವನಿಗೆ ಸತ್ಯನಾರಾಯಣನ ಶಾಪವು ತಟ್ಟಿತು. ಆ ಸಾಧು ವೈಶ್ಯನು ಅಳಿಯನನ್ನೂ ಕರೆದುಕೊಂಡು ವ್ಯಾಪಾರದ ಸಾಮಾನುಗಳನ್ನು ಹಡಗಿನಲ್ಲಿ ಹೇರಿಕೊಂಡು ವ್ಯಾಪಾರಕ್ಕೆಂದು ಹೊರಟು ವ್ಯಾಪಾರ ಮಾಡುತ್ತಾ

ರತ್ನಸಾನುಪುರೇ ರಮ್ಯೇ ಗತ್ವಾ ಸಿಂಧು ಸಮೀಪತಃ ।

ಸಮುದ್ರತೀರದಲ್ಲಿದ್ದ ರತ್ನಸಾನುಪುರವೆಂಬ ಊರಿಗೆ ಬಂದು ಅಲ್ಲಿ ಬಿಡಾರ ಮಾಡಿದನು. ಅಲ್ಲಿದ್ದಾಗ ಕೆಲವು ಜನ ಕಳ್ಳರು ರಾಜನ ಮನೆಗೆ ನುಗ್ಗಿ ಧನವನ್ನು ಕದ್ದು ಓಡುತ್ತಿದ್ದಾಗ ರಾಜಭಟರ ಕೈಗೆ ಸಿಕ್ಕುಬೀಳುವಂತಾದ್ದರಿಂದ ಅವಸರದಲ್ಲಿ ವೈಶ್ಯರಿದ್ದ ಕಡೆಯೇ

ಧನಂ ಸಂಸ್ಥಾಪ್ಯ ತತ್ರೈವ ಶೀಘ್ರಮೇವ ಪಲಾಯಿತಾ ।

ತಾವು ಕದ್ದಿದ್ದ ದುಡ್ಡನ್ನು ಅಲ್ಲೇ ಬಿಟ್ಟು ತಪ್ಪಿಸಿಕೊಂಡು ಪಲಾಯನ ಮಾಡಿಬಿಟ್ಟರು. ಅತ್ತಲಾಗಿ ಕಳ್ಳರನ್ನು ಅಟ್ಟಿಸಿಕೊಂಡು ಬಂದ ರಾಜಭಟರು,

ದೃಷ್ಟ್ವಾ ನೃಪಧನಂ ತತ್ರ ಬಧ್ವಾ ನೀತೌ ವಣಿಕ್‌ಸುತೌ ।

ರಾಜನ ದುಡ್ಡು ಅಲ್ಲೇ ಬಿದ್ದಿದ್ದುದನ್ನು ಕಂಡು, ಇವರೇ ಕಳ್ಳರೆಂದು ಭ್ರಮಿಸಿ ಅವರಿಬ್ಬರಿಗೂ ಬೇಡಿ ಹಾಕಿ, ಆ ಇಬ್ಬರು ವೈಶ್ಯರನ್ನೂ ರಾಜನ ಬಳಿಗೆ ಕರೆದುಕೊಂಡು ಹೋಗಿ ನಿಲ್ಲಿಸಿ 'ನಿಮ್ಮ ದುಡ್ಡು ಇವರ ಬಳಿಯಲ್ಲೇ ಇತ್ತು' ಎಂದು ಹೇಳಿ ದುಡ್ಡನ್ನೂ ಕೊಟ್ಟರು. ವೈಶ್ಯರು ತಾವು ಕಳ್ಳರಲ್ಲವೆಂದು ಹೇಳಿಕೊಂಡರೂ ಕೂಡ ಚಂದ್ರಕೇತುವೆಂಬ ಆ ರಾಜನು ಅವರ ಮಾತುಗಳನ್ನು ಲೆಕ್ಕಿಸದೆ

ಅತಸ್ತಯೋರ್ಧನಂ ರಾಜ್ಞಾ ಗೃಹೀತಂ ಚಂದ್ರಕೇತುನಾ ।

ರಾಜನು ಅವರ ಬಳಿಯಿದ್ದ ದುಡ್ಡನ್ನು ಕಿತ್ತುಕೊಂಡು ಅವರನ್ನು ಕಾರಾಗೃಹಕ್ಕೆ ಕಳುಹಿಸಿಬಿಟ್ಟನು. ಹೀಗೆ ಭಗವಂತನ ಆಗ್ರಹಕ್ಕೆ ಗುರಿಯಾದರೆ ಅನೇಕ ಕಷ್ಟಗಳು ಒದಗುವುವು.

ಅಷ್ಟಕ್ಕೇ ಮುಗಿಯಲಿಲ್ಲ ದೇವರ ಶಾಪ. ಊರಲ್ಲಿ ವೈಶ್ಯನ ಹೆಂಡತಿಯೂ ಮಗಳೂ ಇದ್ದ ಕಡೆ ಚೋರನು ನುಗ್ಗಿ, ಇದ್ದ ಬದ್ದ ಎಲ್ಲವನ್ನೂ ಹೊತ್ತುಕೊಂಡು ಹೋದನು.

ಚೋರೇಣಾಪಹೃತಂ ಸರ್ವಂ ತತ್ರ ಯದ್ಯತ್ ಸ್ಥಿತಂ ಧನಮ್ ।
ಅನ್ನ ಚಿಂತಾಪರಾ ಭೂತ್ವಾ ಬಿಭ್ರಾಮ ಚ ಗೃಹೇ ಗೃಹೇ ॥

ಕಳ್ಳರು ಎಲ್ಲ ಹೊತ್ತುಕೊಂಡು ಹೋದದ್ದರಿಂದ ಹೊಟ್ಟೆಗೆ ಅನ್ನವಿಲ್ಲದಂತಾಗಿ ಲೀಲಾವತಿ, ಕಲಾವತಿ ಇಬ್ಬರೂ ಅನ್ನಕ್ಕಾಗಿ ಮನೆಮನೆ ಅಲೆಯುವಂಥಾ ಪರಿಸ್ಥಿತಿಯುಂಟಾಯಿತು.

ಈ ಪ್ರಕಾರ ಸತ್ಯನಾರಾಯಣ ಪೂಜೆ ಮಾಡದೆ ಅಲಕ್ಷ್ಯ ಮಾಡುವವರಿಗೆ ಅನೇಕ ವಿಧವಾದ ಕಷ್ಟನಷ್ಟಗಳು, ಹಾನಿ, ದುಃಖ ಎಲ್ಲವೂ ಪ್ರಾಪ್ತವಾಗುತ್ತವೆ ಎಂಬಲ್ಲಿಗೆ ಸತ್ಯನಾರಾಯಣ ವ್ರತಕಥೆಯಲ್ಲಿ ಮೂರನೆಯ ಅಧ್ಯಾಯ ಸಮಾಪ್ತವಾಯಿತು.

ನಾಲ್ಕನೆಯ ಅಧ್ಯಾಯ

೧೧. ದುಃಖಪರಿಹಾರ – ಆ ಭಗವಂತನನ್ನು 'ಭಯಕೃದ್ ಭಯನಾಶನಃ' ಎಂದು ಹೇಳುತ್ತಾರೆ. ಅವನನ್ನು ಮರೆತರೆ ಭಯ, ನಷ್ಟ,ಹಾನಿ ಎಲ್ಲವೂ ಆಗುತ್ತವೆ. ಆದರೆ ಅವನನ್ನು ಸ್ಮರಣೆ ಮಾಡಿದರೆ, ಕಷ್ಟಗಳೂ ದೂರವಾಗಿ ಸುಖವಾಗುತ್ತದೆ. ಅದರಂತೆ ವೈಶ್ಯಸಾಧು ಅವನನ್ನು ಮರೆತದ್ದರಿಂದ – ಅವನ ವ್ರತ ಮಾಡದೆ ಅಲಕ್ಷ್ಯ ಮಾಡಿದ್ದರಿಂದ –ಹಿಂದಿನ ಅಧ್ಯಾಯದಲ್ಲಿ ವಿವರಿಸಿದಂತೆ ಅವನಿಗೆ ನಾನಾ ವಿಧವಾದ ಕಷ್ಟಗಳು ಬಂದಡರಿದುವು. ಅವನ ಸ್ಮರಣೆಯಿಂದ ಹೇಗೆ ಎಲ್ಲ ಆಪತ್ತುಗಳು ನಿವಾರಣೆಯಾಗುವುದೆಂಬುದನ್ನು ಈ ಅಧ್ಯಾಯ ನಿರೂಪಣೆ ಮಾಡುತ್ತದೆ.

೧೨. ತಾಯಿ ಮಕ್ಕಳ ಪ್ರಾರ್ಥನೆ – ಒಂದು ದಿನ ಕಲಾವತಿ ಭಿಕ್ಷಕ್ಕೆ ಹೋಗಿದ್ದ ಮನೆಯಲ್ಲಿ ಸತ್ಯನಾರಾಯಣ ಪೂಜೆಯಾಗುತ್ತಿತ್ತು. ಅವಳನ್ನು ಮನೆಯ ಯಜಮಾನಿ ಆದರಿಸಿ ಕರೆದು ಪೂಜೆ ನೋಡಿಕೊಂಡು ಹೋಗುವಂತೆ ಹೇಳಿದಳು. ಅದರಿಂದ ಕಲಾವತಿ ಅವರ ಜೊತೆಯಲ್ಲಿ ರಾತ್ರಿಯೆಲ್ಲಾ ಇದ್ದು ಬೆಳಿಗ್ಗೆ ಪ್ರಸಾದವನ್ನು ಸ್ವೀಕರಿಸಿ ಮನೆಗೆ ಬಂದಳು.ತಾಯಿ ಲೀಲಾವತಿ ಮಗಳನ್ನು 'ರಾತ್ರಿ ಎಲ್ಲಿ ಹೋಗಿದ್ದಿ? ಏಕೆ ಬರಲೇ ಇಲ್ಲ?' ಎಂದು ಕೇಳಿದಳು. ಅದಕ್ಕೆ ಮಗಳು 'ಸತ್ಯನಾರಾಯಣನ ಪೂಜೆ ಆಗುತ್ತಿತ್ತು. ಅದನ್ನು ನೋಡುತ್ತಾ ಕೂತಿದ್ದೆ' ಎಂದು ಹೇಳಿ ತಂದಿದ್ದ ಪ್ರಸಾದವನ್ನು ಕೊಟ್ಟಳು. ಲೀಲಾವತಿ ಭಕ್ತಿಯಿಂದ ಅದನ್ನು ಸ್ವೀಕರಿಸಿದಾಗ ಅವಳಿಗೆ ವೈಶ್ಯಸಾಧು ಮಾಡಿದ ಪ್ರತಿಜ್ಞಾಭಂಗದ ವಿಚಾರ ನೆನಪಾಯಿತು. ಆ ಕ್ಷಣ ಆಕೆ ಹರಕೆ ಕಟ್ಟಿಟ್ಟು 'ನಾವೂ ನಿನ್ನ ಪೂಜೆಯನ್ನು ಮಾಡುತ್ತೇವೆ. ಆದರೆ ಸ್ವಾಮಿ

ಅಪರಾಧಂ ಚ ಮೇ ಭರ್ತುರ್ ಜಾಮಾತುಃ ಕ್ಷಂತುಮರ್ಹಸಿ ।

ನನ್ನ ಯಜಮಾನನ ಮತ್ತು ಅಳಿಯನ ತಪ್ಪುಗಳನ್ನು ಕ್ಷಮಿಸು. ನಮ್ಮ ಕಷ್ಟವನ್ನು ದೂರಮಾಡು. ನನ್ನ ಯಜಮಾನರಿಗೂ ಅಳಿಯನಿಗೂ ಕ್ಷೇಮವಾಗಲಿ' ಎಂದು ಪ್ರಾರ್ಥಿಸಿಕೊಂಡಳು.

೧೩. ಬಂಧನದಿಂದ ಬಿಡುಗಡೆ – ಅದರಿಂದ ಪ್ರಸನ್ನನಾದ ಸತ್ಯನಾರಾಯಣನು ಚಂದ್ರಕೇತುರಾಜನಿಗೆ ಸ್ವಪ್ನದಲ್ಲಿ ಕಾಣಿಸಿಕೊಂಡು ಹೀಗೆ ಆಜ್ಞೆ ಮಾಡಿದನು – 'ನೀನು

ಸೆರೆ ಮನೆಯಲ್ಲಿಟ್ಟ ಇಬ್ಬರು ವೈಶ್ಯರೂ ಕಳ್ಳರಲ್ಲ, ಅವರನ್ನು ಬಿಟ್ಟು ಅವರ ಹಣವನ್ನೂ ಕೊಟ್ಟು ಕಳುಹಿಸು.' ಅದರಂತೆ ರಾಜನು ಆ ವೈಶ್ಯರನ್ನು ಸೆರೆಯಿಂದ ಬಿಡಿಸಿ, ಅವರ ಹಣವನ್ನು ಅವರಿಗೆ ಹಿಂದಕ್ಕೆ ಕೊಡುವುದಲ್ಲದೆ

ಪುರಸ್ಕೃತ್ಯ ವಣಿಕ್ ಪುತ್ರೌ ವಚನಾತ್ ತೋಷಯದ್ ಭೃಶಮ್ ।

(ಭೃಶಮ್ - ಚೆನ್ನಾಗಿ, ಬಹಳ)

ಅವರಿಬ್ಬರಿಗೂ ಸತ್ಕಾರ ಮಾಡಿ ಒಳ್ಳೆಯ ಮಾತು ಹೇಳಿ ಕಳುಹಿಸಿಕೊಟ್ಟನು. ಹೀಗೆ ಸೆರೆಯಿಂದ ಬಿಡುಗಡೆಯಾದ ಇಬ್ಬರು ವೈಶ್ಯರೂ ತಮ್ಮ ಪದಾರ್ಥಗಳನ್ನು ಜೋಡಿಸಿಕೊಂಡು ತಮ್ಮ ಊರಿಗೆ ಹಿಂತಿರುಗುವುದಕ್ಕೆ ಸಿದ್ಧರಾಗುತ್ತಿದ್ದರು.

೧೪. ವೈಶ್ಯಸಾಧುವಿನ ದುರ್ಬುದ್ಧಿ – ವೈಶ್ಯರು ಬಂಧನದಿಂದ ಬಿಡುಗಡೆಯಾದರೂ ವೈಶ್ಯಸಾಧುವಿನ ಮನಸ್ಸು ಪರಿಪಕ್ವವಾಗಿರಲಿಲ್ಲ, ಅದನ್ನು ಹೊರಗೆಡಹುವುದಕ್ಕಾಗಿ ಭಗವಂತನೇ ಓರ್ವ ಸಾಧು ರೂಪದಿಂದ ಬಂದು ಆ ವೈಶ್ಯನನ್ನು 'ಅಯ್ಯಾ ವೈಶ್ಯರೇ, ನಿಮ್ಮ ಹಡಗಿನಲ್ಲಿ ಏನು ಸಾಮಾನಿದೆ?' ಎಂದು ಪ್ರಶ್ನಿಸಿದನು. ಅದಕ್ಕೆ ಕೋಪಿಸಿಕೊಂಡ ವೈಶ್ಯಸಾಧುವು ಅವನಿಗೆ ಹೀಗೆ ಹೇಳಿದನು –

ಕಥಂ ಪೃಚ್ಛಸಿ ಮೇ ದಂಡಿನ್ ಮುದ್ರಾಂ ನೇತುಂ ಕಿಮಿಚ್ಛಸಿ ।
ಲತಾ ಪತ್ರಾದಿಕಂ ಚೈವ ವರ್ತತೇ ॥

ಎಲೋ ಸಾಧು, ನಿನಗೇಕೋ ನನ್ನ ಗೊಡವೆ. ನೀಚನೆ, ನನ್ನ ದುಡ್ಡು ಅಪಹರಿಸಬೇಕೆಂದಿದ್ದೀಯಾ? ಹಡಗಿನಲ್ಲೇನಿದೆ, ಎಲ್ಲಾ ಎಲೆ ಬಳ್ಳಿಗಳು ಎಂದು ಕೋಪದಿಂದ ಹೇಳಿದನು. ಅದನ್ನು ಕೇಳಿ ಸಾಧುವು –

ಸತ್ಯಂ ಭವತು ತೇ ವಚಃ । ಏವಮುಕ್ತ್ವಾ ಗತಃ ಶೀಘ್ರಮ್ ।

'ನಿನ್ನ ಮಾತು ಸತ್ಯವಾಗಲಿ' ಎಂದು ಹೇಳಿ ಬೇಗನೆ ಹೊರಟು ಹೋದನು. ವೈಶ್ಯನು ಹಡಗಿಗೆ ಹೋಗಿ ನೋಡಿದಾಗ ಅವನ ಪದಾರ್ಥಗಳೆಲ್ಲಾ ಮಾಯವಾಗಿ ಹೋಗಿ ಎಲ್ಲವೂ ಎಲೆ ಬಳ್ಳಿಯೇ ಆಗಿಬಿಟ್ಟಿದ್ದುವು. ಅದನ್ನು ನೋಡಿ

ದೃಷ್ಟ್ವಾ ಲತಾದಿಕಂ ಚೈವ ಮೂರ್ಛಿತೋ ನ್ಯಪತದ್ ಭುವಿ ।

ಎಲೆ ಬಳ್ಳಿಯಿಂದ ತುಂಬಿದ್ದನ್ನು ನೋಡಿ ಸಹಿಸಲಾರದೆ ಮೂರ್ಛಿತನಾಗಿ ನೆಲದ ಮೇಲೆ ಬಿದ್ದು ಹೊರಳಾಡಿದನು. ಆಗ ಅವನ ಅಳಿಯನೇ ಅವನಿಗೆ ಸಮಾಧಾನ ಮಾಡಿ 'ಆ ಸಾಧುವಿಗೆ ಸುಳ್ಳೇಕೆ ಹೇಳಿದಿರಿ? ಅವನು ಅಲ್ಲೇ ಇದ್ದಾನೆ, ಬನ್ನಿ, ಅವನನ್ನೇ ಮೊರೆಹೋಗೋಣ' ಎಂದು ಹೇಳಿ ಆ ಸಾಧುವಿಗೆ ಅಡ್ಡಬಿದ್ದು ಕ್ಷಮೆ ಬೇಡಿಕೊಂಡರು. ವೈಶ್ಯನು ಸಾಧುವನ್ನು ಕುರಿತು

ಕ್ಷಮಸ್ವ ಚಾಪರಾಧಂ ಮೇ ಮದುಕ್ತಂ ತವ ಸನ್ನಿಧೌ ।

'ನಿಮ್ಮ ಮುಂದೆ ಹೇಳಿದ ತಪ್ಪನ್ನು ಕ್ಷಮಿಸಿರಿ' ಎಂದು ಬೇಡಿಕೊಂಡನು. ಆಗ ಸಾಧುವು, ಸತ್ಯನಾರಾಯಣ ವ್ರತ ಮಾಡದಿದ್ದುದಕ್ಕೆ ವೈಶ್ಯನನ್ನು ಚೆನ್ನಾಗಿ ಬೈದು

ಮಾ ರೋಧೀಃ ಶೃಣು ಮದ್ವಾಕ್ಯಂ ಮಮ ಪೂಜಾ ಬಹಿರ್ಮುಖಃ ।

'ಅಳಬೇಡ ನನ್ನ ಮಾತು ಕೇಳು. ನನ್ನ ಪೂಜೆ ಮಾಡದೇ ಬಿಟ್ಟಿದ್ದಕ್ಕೆ ಇಷ್ಟೆಲ್ಲಾ ಕಷ್ಟವಾಯಿತು. ಇನ್ನಾದರೂ ಪೂಜೆ ಮಾಡು' ಎಂದು ಹೇಳಿ ಕಳುಹಿಸಿದನು. ವೈಶ್ಯನು ಹಡಗನ್ನು ಊರಿನ ಕಡೆ ತಿರುಗಿಸಿದನು.

೧೫. ವೈಶ್ಯನು ಊರಿಗೆ ಹಿಂತಿರುಗಿದ್ದು – ಭಗವಂತನ ಅನುಗ್ರಹದಿಂದ ಎಲ್ಲವೂ ಸರಿಹೋಗಲು ವೈಶ್ಯನೂ ಅವನ ಅಳಿಯನೂ ಎಲ್ಲಸಿದ್ಧತೆ ಮಾಡಿಕೊಂಡು, ತಮ್ಮ ಊರಿಗೆ ಹಿಂತಿರುಗಬೇಕೆಂದು ನಿಶ್ಚಯಿಸಿಕೊಂಡು, ಒಬ್ಬ ದೂತನ ಮುಖಾಂತರ ತಾವಿಬ್ಬರೂ ಬರುವ ಸಮಾಚಾರವನ್ನು ಹೇಳಿಕಳುಹಿಸಿದರು. ಮತ್ತು ಹಡಗನ್ನು ಊರಿನ ಕಡೆ ತಿರುಗಿಸಿದರು. ಪತಿಯು ಬರುವ ವಿಚಾರವನ್ನು ಕೇಳಿ ಲೀಲಾವತೀ ಸತ್ಯನಾರಾಯಣ ಪೂಜೆ ಮುಗಿಸಿ, ಮಗಳಿಗೆ 'ನೀನೂ ಪೂಜೆ ಮುಗಿಸಿಕೊಂಡು ಬಾ' ಎಂದು ಹೇಳಿ ತಾನು ಗಂಡನನ್ನೂ ಅಳಿಯನನ್ನೂ ಎದುರುಗೊಳ್ಳಲು ಹೊರಟಳು.

೧೬. ಕಲಾವತಿ ಮಾಡಿದ ಅಪರಾಧ – ಆದರೆ ಕಲಾವತಿ ಪೂಜೆಯನ್ನೇನೋ ಮಾಡಿದಳು. ಆದರೆ ಗಂಡ ಬರುವನೆಂಬ ಆತುರದಲ್ಲಿ ಪ್ರಸಾದವನ್ನು ಸ್ವೀಕರಿಸದೆ, ಹಾಗೆಯೇ ಗಂಡನನ್ನು ನೋಡಬೇಕೆಂದು ಹೊರಟುಬಿಟ್ಟಳು.

ವ್ರತಂ ಕೃತ್ವಾ ಸಮಾಪ್ಯ ಚ । ಪ್ರಸಾದಂ ತು ಪರಿತ್ಯಜ್ಯ ಗತಾ ಸಾ ಹಿ ಪತಿಂ ಪ್ರತಿ ॥

ಅದರಿಂದ ಅವಳು ಬರುವ ಹೊತ್ತಿಗೆ ಅಳಿಯ ಬರುತ್ತಿದ್ದ ಹಡಗೇ ಮುಳುಗು-ವಂತಾಯಿತು. ಅದನ್ನು ನೋಡಿ ಅವಳು ಬಿದ್ದು ಹೊರಳಾಡಲಾರಂಭಿಸಿದಳು. ಆಗ ಒಂದು ಆಕಾಶವಾಣಿಯಾಗಿ 'ಅವಳು ಪ್ರಸಾದ ಸ್ವೀಕರಿಸದೆ ಬಂದಿದ್ದಾಳೆ. ಅದರಿಂದ ಈ ಕಷ್ಟ ಬಂದಿತು. ಪ್ರಸಾದ ಸ್ವೀಕರಿಸಿ ಬಂದರೆ ಎಲ್ಲಾ ಸರಿಹೋಗುವುದು' ಎಂದು ಹೇಳಿತು. ಅದರಂತೆ ಕಲಾವತೀ ಮನೆಗೆ ಹೋಗಿ ಕ್ಷಮೆ ಬೇಡಿ ಪ್ರಸಾದ ಸ್ವೀಕರಿಸಿ ಬಂದಳು. ಅಷ್ಟರೊಳಗೆ ಮುಳುಗುತ್ತಿದ್ದ ಹಡಗನ್ನು ಯಾರೋ ಎತ್ತಿದರು. ಅಳಿಯ ಮಾವ ಇಬ್ಬರೂ ಸುಖವಾಗಿ ದಡ ಸೇರಿದರು.

೧೭. ವೈಶ್ಯನಿಗೆ ಸದ್ಗತಿಯಾದುದು – ಅನಂತರ ಎಲ್ಲರೂ ಮನೆಗೆ ಬಂದು ಸತ್ಯನಾರಾಯಣ ವ್ರತವನ್ನು ಸಕಲ ಬಂಧು ಬಾಂಧವರೊಡನೆ ಕೂಡಿ ವೈಭವದಿಂದ ಮಾಡಿದರು. ಅಷ್ಟೇ ಅಲ್ಲದೆ ಪ್ರತಿವರ್ಷವೂ ಪ್ರತಿ ತಿಂಗಳಲ್ಲೂ ಪೂರ್ಣಿಮಾಂ ಚ ಸಂಕ್ರಾಂತೌ ಮಾಸಿ ಮಾಸಿ ಚಚಾರ ಹ ॥ ಹುಣ್ಣಿಮೆಯಲ್ಲೂ ಸಂಕ್ರಮಣ ದಿನಗಳಲ್ಲೂ ಪೂಜೆ ಮಾಡುತ್ತಾ ಕೊನೆಗೆ ಉದ್ಯಾಪನೆಯನ್ನೂ ಮಾಡಿದರು. ಅದರಿಂದ

ಇಹಲೋಕೇ ಸುಖಂ ಭುಕ್ತ್ವಾ ಚಾಂತೇ ಸತ್ಯಪುರಂ ಯಯೌ ।

ಇಹಲೋಕದಲ್ಲಿ ಸಕಲ ಸುಖಭೋಗಗಳನ್ನು ಅನುಭವಿಸಿ ಮರಣಾನಂತರ ಸತ್ಯಲೋಕಕ್ಕೂ ಹೋದನೆಂಬಲ್ಲಿಗೆ ಶ್ರೀ ಸತ್ಯನಾರಾಯಣ ವ್ರತ ಕಥೆಯಲ್ಲಿ ನಾಲ್ಕನೇ ಅಧ್ಯಾಯ ಸಮಾಪ್ತವಾಯಿತು.

ಐದನೆಯ ಅಧ್ಯಾಯ

೧೮. ಅಧ್ಯಾಯಕ್ಕೆ ಪೀಠಿಕೆ – ಈ ಪ್ರಕಾರ ಮೊದಲನೇ ಅಧ್ಯಾಯದಲ್ಲಿ ಸತ್ಯನಾರಾಯಣ ಪೂಜಾ ವಿಧಾನವನ್ನು ಹೇಳಿದರು. ಎರಡನೇ ಅಧ್ಯಾಯದಲ್ಲಿ ಆ ವ್ರತಾನುಷ್ಠಾನ ಮಾಡಿದ್ದರಿಂದ ಕಾಶಿಯ ಬ್ರಾಹ್ಮಣನಿಗೂ ಕಟ್ಟಿಗೆ ಮಾರುವವನಿಗೂ ಹೇಗೆ ದಾರಿದ್ರ್ಯ ಕಳೆದು ಐಶ್ವರ್ಯ ಪ್ರಾಪ್ತವಾಯಿತೆಂಬುದನ್ನು ವಿವರಿಸಿದರು. ಮೂರನೇ ಅಧ್ಯಾಯದಲ್ಲಿ ಮಕ್ಕಳಿಗಾಗಿ ವ್ರತವನ್ನು ಮಾಡುತ್ತಿದ್ದ ಉಲ್ಕಾಮುಖ ಮತ್ತು ಭದ್ರಶೀಲಾ ಎಂಬ ರಾಜ ರಾಣಿಯರನ್ನು ನೋಡಿ ವೈಶ್ಯಸಾಧು ತನಗೂ ಮಕ್ಕಳಾದರೆ ತಾನೂ ಆ ವ್ರತ ಮಾಡುವುದಾಗಿ ಹರಸಿಕೊಂಡನು. ಮಗಳು ಹುಟ್ಟಿದರೂ ಆ ವ್ರತ ಮಾಡದೆ ವಚನ ಭ್ರಷ್ಟನಾದನೆಂಬುದನ್ನು ನಿರೂಪಣೆ ಮಾಡಿ ಅದರಿಂದ ಅವನಿಗೆ ಹೇಗೆ ಕಷ್ಟಪರಂಪರೆಗಳು ಬಂದೊದಗಿದವು ಎಂಬುದನ್ನು ನಿರೂಪಣೆ ಮಾಡಿದರು. ನಾಲ್ಕನೆಯ ಅಧ್ಯಾಯದಲ್ಲಿ ಕ್ಷಮೆ ಬೇಡಿಕೊಂಡರೆ ಆ ಸ್ವಾಮಿ ಕಷ್ಟಗಳನ್ನು ಹೇಗೆ ದೂರಮಾಡುತ್ತಾನೆಂಬುದನ್ನು ವರ್ಣಿಸುತ್ತಾ ಆ ವೈಶ್ಯ ಕುಟುಂಬವು ಹೇಗೆ ಸದ್ಗತಿಯನ್ನು ಹೊಂದಿದರೆಂಬುದನ್ನು ವಿವರಿಸಿದರು. ಈಗ ಈ ಐದನೇ ಅಧ್ಯಾಯದಲ್ಲಿ ಸತ್ಯನಾರಾಯಣ ವ್ರತದಲ್ಲಿ ಪ್ರಸಾದವನ್ನು ತಿರಸ್ಕಾರ ಮಾಡಿದರೆ ಹೇಗೆ ಅನರ್ಥವಾಗುವುದೆಂಬುದನ್ನು ತೋರಿಸಿ ಕಥೋಪಸಂಹಾರ ಮಾಡುತ್ತಾರೆ.

೧೯. ಅಂಗಧ್ವಜರಾಜನ ಕಥೆ –

ಆಸೀದಂಗಧ್ವಜೋ ರಾಜಾ ಪ್ರಜಾಪಾಲನತತ್ಪರಃ ।

ಹಿಂದೆ ಅಂಗಧ್ವಜನೆಂಬ ರಾಜನಿದ್ದನು. ಅವನು ಪ್ರಜೆಗಳನ್ನು ಸಂರಕ್ಷಿಸುತ್ತಾ ಧರ್ಮತತ್ಪರನಾಗಿದ್ದನು.

ಏಕದಾ ಸ ಚ ರಾಜೇಂದ್ರೋ ಮೃಗಯಾ ವ್ಯಸನಾರ್ಥತಃ ।
ವನಂ ಗತ್ವಾ ಜನೌ ಸಾಕಂ ಬಭ್ರಾಮ ಚ ಇತಸ್ತತಃ ॥

ಒಂದಾವರ್ತಿ ಆ ರಾಜನು ಬೇಟೆಯಾಡುವ ಮನಸ್ಸುಳ್ಳವನಾಗಿ ಪರಿವಾರ ಸಮೇತನಾಗಿ ಕಾಡಿಗೆ ಹೋಗಿ ಮೃಗಗಳನ್ನು ಬೇಟೆಯಾಡುತ್ತಾ ಅತ್ತ ಇತ್ತ ಅಡ್ಡಾಡಿದನು. ಅದರಿಂದ ಹಸಿವು ಬಾಯಾರಿಕೆಗಳಾಗಿ ತಲ್ಲಣಿಸಿ ಹೋದನು. ಹಾಗೆಯೇ ಅಡ್ಡಾಡುತ್ತಾ ಒಂದು ಆಲದ ಮರದ ಬುಡಕ್ಕೆ ಬಂದನು. ಅಲ್ಲಿ ಗೋಪಾಃ ಕುರ್ವಂತಿ ಸಂತುಷ್ಟಾಃ ಭಕ್ತಿಯುಕ್ತಾಃ ಸಬಾಂಧವಾಃ ॥ ಅನೇಕ ಜನ ಗೊಲ್ಲರು ಬಂಧು–ಬಾಂಧವರಿಂದ ಕೂಡಿಕೊಂಡು ಭಕ್ತಿಯಿಂದ ಸತ್ಯನಾರಾಯಣ ವ್ರತವನ್ನು ಆಚರಿಸುತ್ತಿದ್ದರು.

೨೦. ಗೊಲ್ಲರ ಭಕ್ತಿಶ್ರದ್ಧೆಗಳು – ಅವರು ರಾಜನನ್ನು ಕಂಡು ಬಹಳ ಸಂತೋಷಪಟ್ಟು 'ನಾ ವಿಷ್ಣುಃ ಪೃಥಿವೀಪತಿಃ' ರಾಜನು ವಿಷ್ಣುವಿನ ಅಂಶವೆಂದು ತಿಳಿದು ಭಕ್ತಿಶ್ರದ್ಧಾಪೂರ್ವಕವಾಗಿ ಹೂವು ಹಣ್ಣುಗಳನ್ನೂ ದೇವರ ಪ್ರಸಾದವನ್ನೂ ರಾಜನ ಮುಂದೆ ತಂದಿಟ್ಟು ರಾಜನಿಗೆ ಸಮರ್ಪಿಸಿ –

ಸಂಸ್ಥಾಪ್ಯ ಪುನರಾಗತ್ಯ ಭುಕ್ತಾಃ ಸರ್ವೇ ಯಥೋಚಿತಮ್ ॥

ತಾವು ಹಿಂದಕ್ಕೆ ಬಂದು ಯಥಾಕ್ರಮವಾಗಿ ಎಲ್ಲರೂ ಪ್ರಸಾದವನ್ನು ಸ್ವೀಕರಿಸಿದರು.

೨೧. ಪ್ರಸಾದ ಸ್ವೀಕರಿಸದೇ ಹೋದದ್ದರಿಂದ ಕೇಡಾಯಿತು – ರಾಜನು ಆ ಗೊಲ್ಲರು ತಂದುಕೊಟ್ಟಿದ್ದೆಂದು ಆ ಹೂವು-ಹಣ್ಣುಗಳನ್ನೂ ಪ್ರಸಾದವನ್ನೂ ಸ್ವೀಕರಿಸದೆ ಅಲಕ್ಷ್ಯ ಮಾಡಿದನು.

ತತ್ ಪ್ರಸಾದಂ ತುಪರಿತ್ಯಜ್ಯ ರಾಜಾ ದುಃಖಮವಾಪ ಚ ।
ತಸ್ಯ ಪುತ್ರ ಶತಂ ನಷ್ಟಂ ಧನಧಾನ್ಯಾದಿಕಂ ಚ ಯತ್ ।
ಸತ್ಯದೇವೇನ ತತ್ಸರ್ವಂ ನಾಶಿತಂ ಚ ಸುನಿಶ್ಚಿತಮ್ ।

ಹಾಗೆ ಅವನು ಪ್ರಸಾದವನ್ನು ತಿರಸ್ಕರಿಸಿದ್ದರಿಂದ ಆ ರಾಜನಿಗೆ ಬಹಳ ಅನಿಷ್ಟವುಂಟಾಯಿತು. ಅವನ ನೂರು ಮಕ್ಕಳು ಹಾಳಾದರು. ಅವನ ಧನಧಾನ್ಯ ರಾಜ್ಯ ಕೋಶ ಏನಿತ್ತೋ ಎಲ್ಲವನ್ನೂ ಸ್ವಾಮಿಯು ನಾಶ ಮಾಡಿಬಿಟ್ಟನು.

೨೨. ರಾಜನ ಪಶ್ಚಾತ್ತಾಪ – ರಾಜನಿಗೆ ತಾನು ಪ್ರಸಾದ ತಿರಸ್ಕಾರ ಮಾಡಿದ್ದರಿಂದಲೇ ಇಷ್ಟೆಲ್ಲಾ ಅನಿಷ್ಟ ಒದಗಿತೆಂಬುದು ಅರಿವಾಯಿತು. ಅದಕ್ಕಾಗಿ ಪಶ್ಚಾತ್ತಾಪ ಪಟ್ಟು ಭಗವಂತನನ್ನು ಕ್ಷಮೆ ಬೇಡಿ ಪುನಃ ಗೋಪಾಲಕರಿದ್ದಲ್ಲಿಗೆ ಬಂದು ಅವರೆಲ್ಲರನ್ನೂ ಸೇರಿಸಿಕೊಂಡು ತಾನೂ ಸಹ

ತತೋಽಸೌ ಸತ್ಯದೇವಸ್ಯ ಪೂಜಾಂ ಗೋಪಗಣೈಃ ಸಹ ।
ಭಕ್ತಿಶ್ರದ್ಧಾನ್ವಿತೋ ಭೂತ್ವಾ ಚಕಾರ ವಿಧಿವನ್ನೃಪಃ ।
ಪ್ರಸಾದಂ ಭಕ್ಷಯಿತ್ವಾ ಚ ಕ್ಷಮಾಂ ಸಂಪ್ರಾರ್ಥಯದ್ ವಿಭುಮ್ ॥

ಭಕ್ತಿಶ್ರದ್ಧಾದರಗಳಿಂದ ವಿಧಿಪೂರ್ವಕವಾಗಿ ಸತ್ಯನಾರಾಯಣನ ಪೂಜೆ ಮಾಡಿ ಪ್ರಸಾದವನ್ನು ಸ್ವೀಕರಿಸಿ ಭಗವಂತನ ಕ್ಷಮೆಯನ್ನು ಬೇಡಿದನು. ಆದರಿಂದ ಪ್ರಸನ್ನನಾದ ಆ ಸ್ವಾಮಿಯ ಅನುಗ್ರಹದಿಂದ ಅವನಿಗೆ ರಾಜ್ಯ ಕೋಶ ಮಕ್ಕಳು ಎಲ್ಲರೂ ದೊರೆತರು ಮತ್ತು ಇಹಲೋಕದಲ್ಲಿ ಸುಖವನ್ನು ಅನುಭವಿಸಿ ಮರಣಾನಂತರವೂ ಸದ್ಗತಿಯನ್ನು ಪಡೆದನು.

ಅತೋ ದೇವಪ್ರಸಾದೇನ ಧನಪುತ್ರಾನ್ವಿತೋಽಭವತ್ ।
ಇಹಲೋಕೇ ಸುಖಂ ಭುಕ್ತ್ವಾ ಚಾಂತೇ ಸತ್ಯಪುರಂ ಯಯೌ ॥

೨೩. ಕಥೋಪಸಂಹಾರ – ಹೀಗೆ ಕಥಾ ನಿರೂಪಣಾ ಮಾಡಿದ ಸೂತಪುರಾಣಿಕರು ಶೌನಕಾದಿಗಳನ್ನು ಕುರಿತು ಹೀಗೆ ಸಂಬೋಧಿಸಿ ಹೇಳಿದರು-

ಯ ಇದಂ ಕುರುತೇ ಸತ್ಯವ್ರತಂ ಪರಮದುರ್ಲಭಮ್ ।
ಶೃಣೋತಿ ಚ ಕಥಾಂ ಪುಣ್ಯಾಂ ಭುಕ್ತಿಮುಕ್ತಿಫಲಪ್ರದಮ್ ।
ಧನ ಧಾನ್ಯಾದಿಕಂ ತಸ್ಯ ಭವೇತ್ ಸತ್ಯಪ್ರಸಾದತಃ ॥

ಪರಮ ದುರ್ಲಭವಾದ ಈ ಸತ್ಯನಾರಾಯಣ ವ್ರತವನ್ನು ಯಾರು ಮಾಡುತ್ತಾರೋ, ಮತ್ತು ಪುಣ್ಯಕರವಾದ ಈ ಕಥೆಯನ್ನು ಹೇಳುತ್ತಾರೋ ಮತ್ತು ಕೇಳುತ್ತಾರೋ ಅವರೆಲ್ಲರಿಗೂ ಭಗವಂತ ಸತ್ಯನಾರಾಯಣನ ಅನುಗ್ರಹದಿಂದ ಧನಧಾನ್ಯಾದಿ ಸಕಲೈಶ್ವರ್ಯವೂ ಪ್ರಾಪ್ತವಾಗುತ್ತದೆ. ದರಿದ್ರರಿಗೆ ಧನ ಪ್ರಾಪ್ತವಾಗುವುದು, ಮಕ್ಕಳಿಲ್ಲದವರಿಗೆ ಮಕ್ಕಳಾಗುತ್ತದೆ. ಭೀತರಿಗೆ ಭಯ ಪರಿಹಾರವಾಗುತ್ತದೆ. ಸಕಲೇಷ್ಟಾರ್ಥಗಳೂ ಸಿದ್ಧಿಸುವುವು.

ವಿಶೇಷತಃ ಕಲಿಯುಗೇ ಸತ್ಯಪೂಜಾ ಫಲಪ್ರದಾ ॥

ಆದರಲ್ಲೂ ಕಲಿಯುಗದಲ್ಲಿ ಈ ಸತ್ಯಪೂಜೆ ಬಹಳ ಫಲಪ್ರದವು ಎಂಬಲ್ಲಿಗೆ ಐದನೇ ಅಧ್ಯಾಯ ಸಮಾಪ್ತವಾಯಿತು.

ಲೋಕಾಃ ಸಮಸ್ತಾಃ ಸುಖಿನೋ ಭವಂತು ।

ಶ್ರೀಕೃಷ್ಣಾರ್ಪಣಮಸ್ತು

ಲೇಖಕನ ಮಂಗಳಾಚರಣೆ

ಸತ್ಕಥಾ ಸತ್ಯದೇವಸ್ಯ ಸಕಲೈರ್ಮಧುರೈಃ ಪದ್ಯೈಃ ।
ಕಥಿತಾ ವಿಷ್ಣುತೀರ್ಥೇನ ಪ್ರೀತ್ಯರ್ಥಂ ತಸ್ಯ ಚೈವ ಹಿ ॥

ಮಂಗಳ ಶ್ಲೋಕ

ಅಕ್ಷಯಂ ಕರ್ಮ ಯಸ್ಮಿನ್ ಪರೇ ಸ್ವರ್ಪಿತಮ್ ।
ಪ್ರಕ್ಷಯಂ ಯಾಂತಿ ದುಃಖಾನಿ ಯನ್ನಾಮತಃ ।
ಅಕ್ಷರೋ ಯೋಽಜರಃ ಸರ್ವ ದೈವಾಮೃತಃ
ಕುಕ್ಷಿಗಂ ಯಸ್ಯ ವಿಶ್ವಂ ಸದಾಜಾದಿಕಮ್ ॥

ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾಖಂಡಮಂಡನಮ್ ॥

॥ ಶ್ರೀಕೃಷ್ಣಾರ್ಪಣಮಸ್ತು ॥